# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

NESARU TINGALOLE Vol XV - 7-8 JULY - AUGUST 1997

ಈ ಸಂಚಿಕೆಯಲ್ಲಿ


| | | |
|---|---|---|
| ಸುತ್ತ-ಮುತ್ತ | | 2 |
| 50 Years Ago | • *B.S. Ramanna* | 3 |
| ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ | • ಡಾ। ಗೊರೂರು ರಾಮಸ್ವಾಮಿ ಅಯ್ಯಂಗಾರ್ | 3 |
| ನ್ಯಾಯಪಥ | • 'ಶಂಖನಾದ' ಉಮೇಶ್ | 10 |
| An Unforgettable Experience | • *Dharmaraj S. Kulkarni* | 13 |
| ಡಾ। ದೇಜಗೌಡರಿಗೆ ಪ್ರಶಸ್ತಿ | | 15 |


The Mysore Association, Bombay
393, Bhaudaji Road, Matunga, Mumbai-400 019.
Tel. : 402 4647 • Grams : 'KARUNADU'

## ಕನ್ನಡ ಸಂಘ ಅಣುಶಕ್ತಿ ಕೇಂದ್ರ (ರಿ)

ವಿಷಯ ವಿಜ್ಞಾನ ಲೇಖನ ಸ್ಪರ್ಧೆ

ಭಾಭಾ ಪರಮಾಣು ಕೇಂದ್ರದ ಕನ್ನಡ ಸಂಘ ಅಣುಶಕ್ತಿ ಕೇಂದ್ರ (ರಿ) ತನ್ನ ಬೆಳ್ಳಿ ಹಬ್ಬದ ಪ್ರಯುಕ್ತ 1997ರಲ್ಲಿ ವಿಜ್ಞಾನ ಲೇಖನ ಸ್ಪರ್ಧೆಯನ್ನು ಆಯೋಜಿಸಿದೆ. ಎಲ್ಲರಿಗೂ ಮುಕ್ತ ಪ್ರವೇಶ.

ವಿಷಯ : ಭವಿಷ್ಯದಲ್ಲಿ ಭಾರತದ ಶಕ್ತಿಯ ಬೇಡಿಕೆ ಹಾಗೂ ಪರಿಹಾರ

ಪ್ರಥಮ ಬಹುಮಾನ : ರೂ. 500.00; ದ್ವಿತೀಯ: ರೂ.300.00; ತೃತೀಯ:ರೂ. 200.00

ವಿದ್ಯಾರ್ಥಿಗಳಿಗೆ ವಿಶೇಷ ಬಹುಮಾನಗಳು

ಫುಲ್‌ಸ್ಕೇಪ್ ಹಾಳೆಯ ಒಂದೇ ಮಗ್ಗುಲಲ್ಲಿ ಸುಮಾರು 1500ರಿಂದ 2000 ಶಬ್ದಗಳ ಮಿತಿಯಲ್ಲಿ ಬರೆದ ಲೇಖನವನ್ನು ಕೆಳಗಿನ ವಿಳಾಸಕ್ಕೆ ಸೆಪ್ಟೆಂಬರ್ 30ರ ಒಳಗೆ ತಲಪುವಂತೆ ಕಳುಹಿಸತಕ್ಕದ್ದು. ಪ್ರಶಸ್ತಿ ಪಡೆದ ಲೇಖನಗಳನ್ನು ಸಂಘದ ಮುಖಪತ್ರ, ಬೆಳಗುವಿನಲ್ಲಿ ಪ್ರಕಟಿಸಲಾಗುವುದು.

ವಿಳಾಸ : Dr. Ramchandra Bhat
Material Science Division
B.A.R.C. Mumbai 400 085

## DEPARTMENT OF KANNADA : UNIVERSITY OF MUMBAI

Certificate & Diploma Course in Kannada (Part-time, One year). Classes for which will commence from Saturday, 9th August, 1997

Prescribed forms of application & Syallabus are to be obtained from the University Department of Kannada., Applications should reach the Head, Univ. Dept. of Kannada on or before 5th August 1997. Further details can be had from the office of the Univ. Dept. of Kannada.

(G. N. Upadhya)
In-charge Head,
Univ. Dept of Kannada
Mumbai-400 098

# ಸುತ್ತಮುತ್ತ

## ಕರ್ನಾಟಕ ಸಂಘ, ಡೊಂಬಿವಲಿ (ರಿ)

**ಕಥೆ, ಕವನ, ಹರಟೆ ಹಾಗೂ ಪ್ರವಾಸ ಕಥನ ಸ್ಪರ್ಧೆ**

ಪ್ರತಿ ವರ್ಷದಂತೆ ಈ ವರ್ಷವೂ ಡೊಂಬಿವಲಿ ಕರ್ನಾಟಕ ಸಂಘವು ಸಮಸ್ತ ಒಳನಾಡು ಹಾಗೂ ಹೊರನಾಡು ಕನ್ನಡಿಗರಿಗಾಗಿ ಸಣ್ಣಕಥೆ, ಕವನ, ಹರಟೆ ಹಾಗೂ ಪ್ರವಾಸ ಕಥನ ಸ್ಪರ್ಧೆಗಳನ್ನು ಕನ್ನಡ ಭಾಷೆಯಲ್ಲಿ ಏರ್ಪಡಿಸಿದೆ. ಈ ಎಲ್ಲಾ ವಿಭಾಗಗಳಲ್ಲಿ ಮೂರು ಬಹುಮಾನಗಳನ್ನು ಇರಿಸಲಾಗಿದೆ.

ಪ್ರಥಮ ಬಹುಮಾನ : ರೂ. 1,000/-
ದ್ವಿತೀಯ ಬಹುಮಾನ : ರೂ. 500/-
ತೃತೀಯ ಬಹುಮಾನ : ರೂ. 300/-

ಸ್ಪರ್ಧೆಯ ನಿಯಮಗಳು ಹಾಗೂ ಇತರ ವಿವರಗಳು ಈ ಕೆಳಗಿನಂತಿವೆ :-

1. ಈ ಸ್ಪರ್ಧೆಯಲ್ಲಿ ಸಮಸ್ತ ಕನ್ನಡಿಗರು ಭಾಗವಹಿಸಲು ಅವಕಾಶವಿದೆ.
2. ಡೊಂಬಿವಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಹಾಗೂ ಉಪ-ಸಮಿತಿಗಳ ಸದಸ್ಯರಿಗೆ ಮತ್ತು ಸಂಘದ ಸಿಬ್ಬಂದಿಗೆ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿಲ್ಲ.
3. ಬರಹ ಅಪ್ರಕಟಿತ ಹಾಗೂ ಸ್ವರಚಿತವಿರಬೇಕು.
4. ಒಬ್ಬರು ಒಂದೊಂದು ಕಥೆ, ಕವನ, ಹರಟೆ ಹಾಗೂ ಪ್ರವಾಸ ಕಥನ ಕಳುಹಿಸಬಹುದು.
5. ಸ್ವವಿಳಾಸದ ಚೀಟಿ ಪ್ರತ್ಯೇಕವಿರಲಿ. ಹೆಸರು, ವಿಳಾಸ ಇಂಗ್ಲಿಷ್‌ನಲ್ಲಿ (Block Letters) ಬರೆಯಿರಿ.
6. ಪ್ರವೇಶ ಶುಲ್ಕವಿಲ್ಲ.
7. ನಿರ್ಣಾಯಕರ ತೀರ್ಮಾನವೇ ಅಂತಿಮ.
8. ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ.
9. ಲಕೋಟೆಯ ಮೇಲೆ ಕಥೆ/ಕವನ/ಹರಟೆ/ಪ್ರವಾಸ ಕಥನ ಎಂದು ನಮೂದಿಸಬೇಕು.
10. ಕಥೆ, ಹರಟೆ ಹಾಗೂ ಪ್ರವಾಸ ಕಥನ (10-12 ಪುಟಗಳಿಗೆ ಮೀರದಂತೆ) ಕವನ (36 ಸಾಲುಗಳಿಗೆ ಮೀರದಂತೆ) ಫುಲ್‌ಸ್ಕೇಪ್ ಬಿಳಿ ಹಾಳೆಯ ಒಂದೇ ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು. ಕಾರ್ಬನ್ ಪ್ರತಿ, ಝೆರಾಕ್ಸ್ ಪ್ರತಿ ಸ್ವೀಕರಿಸಲಾಗದು.
11. ಕೃತಿಗಳು ಹಿಂತಿರುಗಿ ಬೇಕಾದ್ದಲ್ಲಿ, ಸ್ವವಿಳಾಸದ ಅಂಚೆ ಹಚ್ಚಿದ ಲಕೋಟೆ ಪ್ರತ್ಯೇಕವಿರಲಿ.
12. ಬಹುಮಾನ ವಿಜೇತ ಕೃತಿಗಳನ್ನು ಹಿಂತಿರುಗಿಸಲಾಗದು ಹಾಗೂ ಅವುಗಳ ಪ್ರಕಟಣೆಯ ಹಕ್ಕು ಸಂಘದ್ದು.
13. ಸ್ಪರ್ಧೆಯ ಬಗ್ಗೆ ಯಾವುದೇ ತೀರ್ಮಾನವನ್ನು ಕೈಗೊಳ್ಳುವ ಹಕ್ಕನ್ನು ಸಂಘವು ಕಾಯ್ದಿರಿಸಿ ಕೊಂಡಿದೆ.

ಸ್ಪರ್ಧೆಯ ಬರಹಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **25-09-1997**

Address: **Hon. Secretary**
(Library Committee)
Karnataka Sangha
Vasant Chambers,
G. G. Road,
Dombivli (West) 421 202.
Dist. Thane.
Maharashtra State.

**ಜಗಜ್ಯೋತಿ ಕನ್ನಡ ವೃಂದದ ವಾರ್ಷಿಕ ಸಭೆ ಮತ್ತು ನೂತನ ಕಾರ್ಯಕಾರಿ ಸಮಿತಿಯ ಆಯ್ಕೆ**

ಮುಂಬಯಿ : ಜಗಜ್ಯೋತಿ ಕನ್ನಡ ವೃಂದದ 12ನೇ ವಾರ್ಷಿಕ ಮಹಾಸಭೆಯು 20ನೇ ಜುಲೈ, 1997ರಂದು ಕನ್ನಡ ಭವನ ಜೂನಿಯರ್ ಕಾಲೇಜು, ಮುಂಬಯಿ ಇಲ್ಲಿ ಶ್ರೀ ಹರೀಶ್ ಆರ್. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಅಂದಿನ ಸಭೆಯಲ್ಲಿ ಸಂಘದ ನೂತನ ಕಾರ್ಯಕಾರಿ ಸಮಿತಿಯ 1997-98 ಹಾಗೂ 1998-99ರ ಅವಧಿಗೆ ಹರೀಶ್ ಆರ್. ಶೆಟ್ಟಿ (ಅಧ್ಯಕ್ಷ), ಪಿ. ಬಿ. ಚಂದ್ರಹಾಸ್ (ಉಪಾಧ್ಯಕ್ಷ), ವಸಂತ ಎನ್. ಸುವರ್ಣ (ಕಾರ್ಯದರ್ಶಿ), ಚಂದ್ರನಾಯ್ಕ್ (ಜೊತೆ ಕಾರ್ಯದರ್ಶಿ), ಜಗದೀಶ್ ಡಿ. ರೈ (ಖಜಾಂಚಿ), ಜಿ. ಪಿ. ಕುಸುಮ (ಜೊತೆ ಖಜಾಂಚಿ), ರಮೇಶ್ ಎ. ಶೆಟ್ಟಿ (ಸಂಘಟನಾ ಕಾರ್ಯದರ್ಶಿ), ರಾಜು ಆರ್. ಸುವರ್ಣ (ಜೊತೆ ಸ. ಕಾರ್ಯದರ್ಶಿ), ಶಂಭು ಪೂಜಾರಿ (ಆಂತರಿಕ ಲೆಕ್ಕ ಪರಿಶೋಧಕ) ಹಾಗೂ ಹರೀಶ್ ಶೆಟ್ಟಿ, ಶಂಕರ್ ಪೂಜಾರಿ, ಶೇಖರ್ ಯು. ಪೂಜಾರಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

# 50 YEARS AGO- A NOSTALGIC MEMORY

The announcement by Lord Atlee in the British Parliament that India would be freed from the shackles of British hegemony and grant of full freedom at the stroke of midnight on the 14th of August, 1947 was greeted by the whole nation with much euphoria and a sense of fulfilment. Everybody had a vision of living in an idyllic state and in a land of Utopia and everything would be honky-dory in the near future. As the D-day approached, the atmosphere in Bombay was electrifying and Mysore Association was no exception. Every citizen, rich or poor, young or old was engaged in celebrating the historic and solemn occasion in befitting manner.

**Shri Ramanna is one of our senior members. He has widely travelled in India in connection with his work. Here he is sharing his memories of the occasion when India was declared Independent on 14th August 1947.**

The long awaited day was heralded with special poojas and prayers at the temples and churches. Every home and cottage witnessed an unforgetable sense of joy and revelry. By 8.00 p.m. on that day everybody except the old and disabled were out in the streets singing and dancing to the strains of Vande Mataram. Everyone mingled with everyone, poor with rich, young with the old without any distinction or inhibitions. The singing and dancing and the festive mood continued unabated till the wee hours of the morning.

All trains, trams and buses crammed with revellers headed towards Fort area, where all public buildings were profusely illuminated and decorated to herald the D-day.

Finally the appointed hour was ushered in amidst ringing of bells simultaneously in all temples and churches throughout Bombay and suburbs accompanied by fire works.

The process of transfer of power at the historic Red Fort in Delhi to the strains of National Anthem was witnessed by large section of fortunate populace. Not so fortunate throughout the country who could not witness the extra-vaganza had the pleasure of hearing Mr. Melville D'mello vividly describing in his sonorus voice and in his inimitable style the entire process of transfer of power over the All India Radio.

Inspite of the strenous night many members of the Association gathered at 7.00 a.m. next morning on the lawns of the Association and took part in the Flag hoisting ceremony.

— **B. S. Ramanna**

## ಶ್ರೀ ಸ್ವರ್ಣಗೌರಿ ಹಾಗೂ ಮಹಾಗಣಪತಿ ಮಹೋತ್ಸವ 1997

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆಯ ಶ್ರೀ ಈಶ್ವರ ನಾಮ ಸಂವತ್ಸರದ ಭಾದ್ರಪದ ಶುದ್ಧ ತೃತೀಯ/ ಶುಕ್ರವಾರ ದಿನಾಂಕ **5-9-1997**ರಂದು ಶ್ರೀ ಸ್ವರ್ಣಗೌರಿ ಮತ್ತು ಶ್ರೀ ಮಹಾಗಣಪತಿಯನ್ನೂ ಆವಾಹಿಸಿ, ದ್ವಾದಶಿ ಭಾನುವಾರ ದಿನಾಂಕ **14-9-1997**ರ ವರೆಗೆ ಉತ್ಸವವನ್ನು ಅಸೋಸಿಯೇಷನ್‌ನ ಆಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

ಸ್ವರ್ಣಗೌರಿ ಮತ್ತು ಮಹಾಗಣಪತಿ ಉತ್ಸವವನ್ನು ನಮ್ಮ ಅಸೋಸಿಯೇಷನ್‌ನಲ್ಲಿ ಅನೇಕ ವರ್ಷಗಳಿಂದ ತಪ್ಪದೆ ನಡೆಸಿಕೊಂಡು ಬರುತ್ತಿರುವುದು ತಮಗೆಲ್ಲಾ ಗೊತ್ತಿರುವ ವಿಷಯವೇ ಆಗಿದೆ. ಆದರಂತೆ ಪ್ರತೀ ದಿನ ಬೆಳಿಗ್ಗೆ ಅಭಿಷೇಕ, ಅರ್ಚನೆ, ಮಂಗಳಾರತಿಯನ್ನು ಹಾಗೂ ಪ್ರತೀ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ದಿನಾಂಕ **14-9-1997**ನೇ ಭಾನುವಾರ ಬೆಳಿಗ್ಗೆ ಸಕಲ ಪೂಜಾದಿ ಸೇವೆಗಳನ್ನು ಸಲ್ಲಿಸಿ, ಮಹಾ ಮಂಗಳಾರತಿ, ಮೆರವಣಿಗೆಯ ನಂತರ ಗೌರಿ ಗಣಪತಿಯನ್ನು ದಾದರ್ ಸಮುದ್ರ ತೀರದಲ್ಲಿ ವಿಸರ್ಜಿಸಲಾಗುವುದು.

## ಮುಂಬಯಿ ಕನ್ನಡ ಸಂಘದ ವತಿಯಿಂದ ಎಚ್.ಎಸ್.ಸಿ. ಮತ್ತು ಎಸ್.ಎಸ್.ಸಿ. ವಿದ್ಯಾರ್ಥಿಗಳಿಗೆ ನಗದು ಬಹುಮಾನ.

ಮುಂಬಯಿ : ಪುಣೆ ಎಚ್. ಎಸ್. ಸಿ. ಬೋರ್ಡಿನ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಅತೀ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗೆ ಮತ್ತು ಎಸ್.ಎಸ್.ಸಿ.ಯಲ್ಲಿ ಕನ್ನಡ ಮಾಧ್ಯಮದಲ್ಲಿ ಬರೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗೆ ಮುಂಬಯಿ ಕನ್ನಡ ಸಂಘವು ನಗದು ಬಹುಮಾನ ಕೊಡಲು ನಿರ್ಧರಿಸಿದೆ.

ಈ ಎರಡು ಬಹುಮಾನಗಳನ್ನು ಮಧುಗಿರಿ ಮಠ ಶಾಂತವೀರ ಪಾರ್ವತಮ್ಮ ಸ್ಮಾರಕ ದತ್ತಿ ನಿಧಿಯಿಂದ ಪ್ರತಿವರ್ಷ ಕೊಡಲಾಗುತ್ತಿದೆ ಎಂದು ಸಂಘದ ಪತ್ರಿಕಾ ಪ್ರಕಟನೆ ತಿಳಿಸಿದೆ. 1997ನೇ ವರ್ಷದ ಮಾರ್ಚ್ ತಿಂಗಳಲ್ಲಿ ನಡೆದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಎಚ್.ಎಸ್.ಸಿ. ಮತ್ತು ಎಸ್.ಎಸ್.ಸಿ. ವಿದ್ಯಾರ್ಥಿಗಳು ತಮ್ಮ ಅಂಕ ಪಟ್ಟಿಯ ನಕಲು ಪ್ರತಿಯ ಮೇಲೆ ಶಾಲಾ ಮುಖ್ಯೋಪಾಧ್ಯಾಯರ ಅಥವಾ ಪ್ರಾಂಶುಪಾಲರ ಸಹಿ ಪಡೆದು ಈ ಕೆಳಗಿನ ವಿಳಾಸಕ್ಕೆ ಆಗಸ್ಟ್ 31ರ ಒಳಗೆ ತಲುಪುವಂತೆ ಕಳುಹಿಸಿಕೊಡಲು ಸಂಘದ ಕಾರ್ಯದರ್ಶಿಗಳು ಪ್ರಕಟಣೆಯ ಮೂಲಕ ವಿನಂತಿಸಿಕೊಂಡಿದ್ದಾರೆ.

ವಿಳಾಸ : ಮುಂಬಯಿ ಕನ್ನಡ ಸಂಘ,
2, ವೆಂಕಟೇಶ ನಿವಾಸ, ಬಾವುದಾಜಿ
ರಸ್ತೆ, ಮಾಟುಂಗ, ಮುಂಬಯಿ -19
ದೂರವಾಣಿ : 409 9696

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For**
**INDIAN AIR LINES,**
**EAST WEST,**
**MODI LUFT &**
**JET AIRLINES**

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

# ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ

● ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್

ಕರ್ನಾಟಕದಲ್ಲಿ ಎಂದಿನಿಂದಲೂ ಸ್ವಾತಂತ್ರ್ಯದ ಆಕಾಂಕ್ಷೆಯಿತ್ತು ಮತ್ತು ಅದಕ್ಕೂ ಹೋರಾಟ ನಡೆದೇ ಇತ್ತು. ಟಿಪ್ಪುವಿನ ಮರಣಾನಂತರ ಬ್ರಿಟೀಷರಿಗೆ ಅವರು ಭಾವಿಸಿದಂತೆ

**ಈ ಲೇಖನವನ್ನು 'ಅವಲೋಕನ'ದಿಂದ ಆಯ್ದು ನೇಸರು ಓದುಗರಿಗಾಗಿ ನಮ್ಮ ಸ್ವಾತಂತ್ರ್ಯದ ಐವತ್ತನೇ ವಾರ್ಷಿಕೋತ್ಸವದ ನಿಮಿತ್ತ ಇಲ್ಲಿ ಪುನರ್ ಮುದ್ರಿಸಲಾಗಿದೆ.**

ರಾಜ್ಯ ಸುಖವಾಗಿ ದಕ್ಕಲಿಲ್ಲ. ಟಿಪ್ಪು ಮಡಿದ ಅನಂತರ ಅವನ ಸೈನ್ಯದಲ್ಲಿಯೇ ಸರದಾರನಾಗಿದ್ದ ಧೊಂಡೋಜಿ ವ್ಯಾಘ್ (ವ್ಯಾಘ್) ಎಂಬವನು ೧೮೦೦ರಲ್ಲಿ ಬ್ರಿಟಿಷರನ್ನು ಎದುರಿಸಿ ರಾಜ್ಯವನ್ನು ಕಟ್ಟಿದ. ಫ್ರೆಂಚರು ಅವನಿಗೆ ಬೆಂಬಲ ಕೊಟ್ಟರು. ದಕ್ಷಿಣ ಕನ್ನಡ, ಧಾರವಾಡ, ಹರಪನ ಹಳ್ಳಿ ಇಲ್ಲೆಲ್ಲ ಅವನ ಆಧಿಪತ್ಯ ಸ್ಥಾಪನೆಯಾಯಿತು. ಧೊಂಡೋಜಿ ೧೮೦೦ರಲ್ಲಿ ಲೊಂಡ ಎಂಬಲ್ಲಿ ನಡೆದ ಯುದ್ಧದಲ್ಲಿ ಪೇಷ್ವೆಯ ದಂಡನಾಯಕ ದೊಂಡೋಪಂತ್ ಗೋಖಲೆಯನ್ನು ಕೊಂದ. ಧೊಂಡೋಜಿ ವ್ಯಾಘನ ಸೈನ್ಯದಲ್ಲಿ ಐವತ್ತು ಸಾವಿರ ಕಾಲಾಳು ಮತ್ತು ತೊಂಬತ್ತು ಸಾವಿರ ಕುದುರೆ ಸವಾರರು ಇದ್ದರೆಂದು ಉಲ್ಲೇಖವಿದೆ. ಅವನು ಆರ್ಥರ್ ವೈಲ್ಲೆಸ್ಲಿಯ ಸೈನ್ಯದೊಡನೆ ಕೋಣಗಲ್‌ನಲ್ಲಿ ಯುದ್ಧ ಮಾಡುವಾಗ ಮಡಿದ. ಕರ್ನಾಟಕದಲ್ಲಿ ಬ್ರಿಟಿಷರನ್ನು ಎದುರಿಸಿ ಮೊದಲ ದಂಗೆಯೆದ್ದವರು ನಿಜಾಮ್ ರಾಜ್ಯದ ಕೊಪ್ಪಳದ ವೀರಪ್ಪ. ಅವನು ಸೈನ್ಯವನ್ನು ಕೂಡಿಸಿ ಕೊಪ್ಪಳ ಕೋಟೆಯನ್ನು ಸ್ವಾಧೀನ ಮಾಡಿಕೊಂಡು ಸುತ್ತಲ ಪ್ರದೇಶಕ್ಕೆಲ್ಲ ಆಳ್ವಿಕೆವಿಸ್ತರಿಸಿದ. ಬ್ರಿಟಿಷ್ ಸೈನ್ಯ, ಮೇಜರ್ ಡ್ರಿಸ್ಡರ್‌ನ ನಾಯಕತ್ವದಲ್ಲಿ ಕೊಪ್ಪಳದ ಕೋಟೆಯನ್ನು ಮುತ್ತಿತು ಮತ್ತು ವೀರಪ್ಪ ರಣದಲ್ಲಿ ಮಡಿದ. ಮರುವರುಷವೇ ನಿಜಾಮನ ರಾಜ್ಯದಲ್ಲಿ ಶಿವ ಲಿಂಗಯ್ಯ ದೇಶಮುಖ್ ಎಂಬ ಹೆಸರಿನ ಸರದಾರ ಬ್ರಿಟಿಷರ ಆಳ್ವಿಕೆಯನ್ನು ಎದುರಿಸಿದ. ಈ ಹೋರಾಟಕ್ಕೆ ದೇಶಮುಖ್ ದಂಗೆ ಎಂದೇ ಹೆಸರಾಯಿತು. ತಿರುಮಲರಾವ್ ದೇಶಮುಖ್ ಮತ್ತು ಮೇಘಶ್ಯಾಂ ಎಂಬ ಸರದಾರರು ಶಿವಲಿಂಗಯ್ಯನ ಜೊತೆ ಸೇರಿದರು. ನಿಜಾಮ ಬ್ರಿಟಿಷರ ಸಹಾಯವನ್ನು ಕೋರಿದ. ಆಗ 1821ರಲ್ಲಿ ಲೆಫ್ಟಿನೆಂಟ್ ಸದರ್‌ಲ್ಯಾಂಡ್ಸ್ ಶಿವಲಿಂಗಯ್ಯ ಮತ್ತು ಮೇಘಶ್ಯಾಮರ ಮೇಲೆ ದೊಡ್ಡ ಸೈನ್ಯದೊಂದಿಗೆ ದೀರ್ಘಕಾಲದ ಹೋರಾಟ ನಡೆಸಿ, ಯುದ್ಧದಲ್ಲಿ ಅವರನ್ನು ಸೆರೆಹಿಡಿದ.

ಇದೇ ಕಾಲಕ್ಕೆ ಬಿಜಾಪುರ ಜಿಲ್ಲೆಯ ಸಿಂದಗಿ ಎಂಬಲ್ಲಿ ದಿನಾಕರ ದೀಕ್ಷಿತ್ ಎಂಬ ಸರದಾರ, ರಾವ್‌ಜಿ ಬಾಲಾಜಿ ದೇಶ ಪಾಂಡೆ ಮತ್ತು ಸೆಟ್ಟಿಪ್ಪ ತುಕ್ಕಳ್ಳಿ ಎಂಬುವರ ಸಹಾಯದಿಂದ ಪ್ರತಿ ಸರ್ಕಾರವನ್ನು ರಚಿಸಿ ಆಳ್ವಿಕೆಯನ್ನು ಪ್ರಾರಂಭಿಸಿದ. ಸೈನ್ಯ ಬಂದು ದಿವಾಕರ ದೀಕ್ಷಿತನನ್ನು ಅಡಗಿಸಿತು. ಕಿತ್ತೂರು ಚೆನ್ನಮ್ಮನ ಸ್ವಾತಂತ್ರ್ಯದ ಕೆಚ್ಚೂ ದೇಶಪ್ರೇಮವೂ ಮೈ ನವಿರೇಳಿಸುತ್ತದೆ. ಚೆನ್ನಮ್ಮ ಭರತವರ್ಷದ ವೀರಮಗಳಿಯರಲ್ಲಿ ಉಜ್ವಲ ತಾರೆ. ಬ್ರಿಟಿಷರು ಕಿತ್ತೂರಿನ ಆಡಳಿತದಲ್ಲಿ ಪ್ರವೇಶಿಸುವುದನ್ನು ಅವಳು ಪ್ರತಿಭಟಿಸಿದಳು. ಸಿಂಹಿಣಿಯಂತೆ ಸೆಟೆದು ಯುದ್ಧಕ್ಕೆ ನಿಂತಳು. ಅಂದಿನ ಸ್ವಾತಂತ್ರ್ಯ ಹೋರಾಟಗಾರರಿಗೆಲ್ಲ ಅಳಿಯದ ಉತ್ಸಾಹದ ಚಿಲುಮೆಯಾದಳು. ಬ್ರಿಟಿಷ್ ಸೈನ್ಯಾಧಿಕಾರಿ ಥ್ಯಾಕರೆ ಕಿತ್ತೂರನ್ನು ಜಯಿಸಲು ದೊಡ್ಡ ಸೈನ್ಯದೊಂದಿಗೆ ಬಂದು ಮುತ್ತಿಗೆ ಹಾಕಿದನು. ಯುದ್ಧದಲ್ಲಿ ಥ್ಯಾಕರೆ ಸತ್ತ. ಅನೇಕ ಬ್ರಿಟಿಷ್ ಅಧಿಕಾರಿಗಳೂ ಅವರ ಪರಿವಾರದವರೂ ಕಿತ್ತೂರಿನವರಿಗೆ ಸೆರೆ ಸಿಕ್ಕಿದರು. ಅನಂತರ ದಕ್ಷಿಣ ಭಾರತದ ಬ್ರಿಟಿಷ್ ಕಮ್ಯಾಂಡರರು ಭಾರಿ ಸೈನ್ಯವನ್ನು ಕೂಡಿಸಿಕೊಂಡು ಹೋಗಿ ಕಿತ್ತೂರನ್ನು ಮುತ್ತಿದರು. ಬ್ರಿಟಿಷರು ಚೆನ್ನಮ್ಮನನ್ನು ಬೈಲ ಹೊಂಗಲಿನಲ್ಲಿ ಸೆರೆಯಲ್ಲಿಟ್ಟು, ಕಿತ್ತೂರನ್ನು ಮುಂಬಯಿ ಅಧಿಪತ್ಯಕ್ಕೆ ಸೇರಿಸಿಕೊಂಡರು. ಪರತಂತ್ರ ಜೀವನ ಚೆನ್ನಮ್ಮನಿಗೆ ಜಿಗುಪ್ಸೆಯಾಗಿರಬೇಕು. ಅವಳು ಐದೇ ವರುಷಗಳಲ್ಲಿ ತೀರಿಕೊಂಡಳು. ಭಾರತದಲ್ಲಿ ಸೂರ್ಯನೇ ಮುಳುಗದಿದ್ದ ಬ್ರಿಟಿಷ್ ಚಕ್ರಾಧಿಪತ್ಯ ಮಣ್ಣುಪಾಲಾಯಿತು. ಆದರೆ ಚೆನ್ನಮ್ಮನ ಕೀರ್ತಿ ಮಾತ್ರ ಆಚಂದ್ರಾರ್ಕವಾಗಿ ಉಳಿದಿದೆ.

ಚೆನ್ನಮ್ಮನ ಮರಣಾನಂತರವೂ ಆಕೆ ಹೊತ್ತಿಸಿದ ಬಂಡಾಯದ ಕಿಡಿ ಪ್ರಜ್ವಲಿಸುತ್ತಲೇ ನಡೆಯಿತು. ಕಿತ್ತೂರು ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದ ಸಂಗೊಳ್ಳಿ ರಾಯಣ್ಣನೆಂಬ ಸಿಪಾಯಿ, ಚೆನ್ನಮ್ಮನ ದತ್ತು ಮಗನಿಗೆ ರಾಜ್ಯವನ್ನು ಕೊಡಿಸಲು ೧೮೨೯ರಲ್ಲಿ ಒಂದು ಸೈನ್ಯವನ್ನು ಕಟ್ಟಿದ. ಸುರಪುರದ ನಾಯಕನೂ ಅವನಿಗೆ ಸಹಾಯಕನಾದ. ಆದರೆ ಅನಂತರ ಅವರ ಪಕ್ಕದವರೇ ಅವನನ್ನು ಬ್ರಿಟಿಷರಿಗೆ ಹಿಡಿದು ಕೊಟ್ಟರು. ಅವನಿಗೆ ಫಾಸಿಯಾಯಿತು. ಅನಂತರ ಕಿತ್ತೂರಿನ ಮತ್ತೊಬ್ಬ ಪ್ರೇಮಿ ಸರ್ದಾರ್ ಗುರುಸಿದ್ಧಪ್ಪನೂ, ಕಿತ್ತೂರು ದತ್ತು ಪುತ್ರ ಶಿವಲಿಂಗಪ್ಪನನ್ನು ಸಿಂಹಾಸನದ ಮೇಲೆ ಕೂರಿಸಲು ದಂಗೆ ಎದ್ದ. ಬ್ರಿಟಿಷರು ಶಿವಲಿಂಗಪ್ಪನನ್ನು ಸೆರೆಯಲ್ಲಿಟ್ಟರು. ಅದೇ ಕಾಲದಲ್ಲಿ (೧೮೩೩) ಶಂಕರಣ್ಣನೆಂಬ ಸರದಾರನೂ ಬ್ರಿಟಿಷರ ವಿರುದ್ಧ ದಂಗೆ ಎದ್ದ. ಅದು ವಿಫಲವಾಯಿತು. ಮತ್ತೆ ೧೮೩೦ರಲ್ಲಿ, ನಾಗಪ್ಪ ಗಜಪತಿ ಸವ್ವಸೆಟ್ಟಿ ಮತ್ತು ರುದ್ರಪ್ಪ ಕೊಟ್ಟಿಗಿ ಇವರೆಲ್ಲ ಬ್ರಿಟಿಷರಿಗೆ ಎದುರಾಗಿ ಮತ್ತೊಂದು ಸೈನ್ಯವನ್ನು ಕಟ್ಟಿದರು. ಅವರು ಗೋವಾದ ಪೋರ್ಚುಗೀಸರ ಸಹಾಯವನ್ನು ಕೂಡ ಪಡೆಯಲು ಪ್ರಯತ್ನಿಸಿದರು. ಆದರೆ ಅವರೂ ಜಯಶಾಲಿಗಳಾಗಲಿಲ್ಲ. ಬ್ರಿಟಿಷರಲ್ಲಿ ವಿರೋಧವೂ, ಸ್ವಾತಂತ್ರ್ಯ ಪ್ರೇಮವೂ ಎಷ್ಟು ಉಜ್ವಲವಾಯಿತೆಂದರೆ ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷರು ಹಿಡಿದು ಕೊಲ್ಲಲು ಸಹಾಯ ಮಾಡಿದ ಕೋದನಪುರದ ಲಿಂಗನ ಗೌಡ ಎಂಬವನನ್ನು ಕಿತ್ತೂರಿನ ಪ್ರೇಮಿಗಳು ಹಿಡಿದುಕೊಂಡು ಸೈನ್ಯವನ್ನು ಕಟ್ಟಿದರು. ಆದರೆ ಅದು ಬ್ರಿಟಿಷರಿಗೆ ಎದುರಾಗಿ ವಿಫಲವಾಯಿತು. ಈ ಮೇಲಿನ ಹೋರಾಟಗಳ ಸರಮಾಲೆಯಿಂದ, ಕಿತ್ತೂರಿನ ವಿಷಯದಲ್ಲಿ ಜನತೆಗಿದ್ದ ಪ್ರೇಮವೂ ಬ್ರಿಟಿಷರಲ್ಲಿದ್ದ ದ್ವೇಷವೂ ಚೆನ್ನಮ್ಮನ ಸ್ಫೂರ್ತಿಯೂ ವ್ಯಕ್ತವಾಗುತ್ತವೆ. ಇದೇ ಸಂದರ್ಭದಲ್ಲಿ ದಕ್ಷಿಣ ಮತ್ತು ಉತ್ತರ ಕನ್ನಡದ ರೈತರು ಬ್ರಿಟಿಷರಿಗೇ ವಿರುದ್ಧ ದಂಗೆಯೆದ್ದರು. ಕೊಡಗಿನಲ್ಲಿ ಬ್ರಿಟಿಷರು ಚಿಕವೀರ ರಾಜನನ್ನು ಸಿಂಹಾಸನ ಚ್ಯುತನನ್ನಾಗಿ ಮಾಡಿದ ಅನಂತರ, ಅಪರಂಪರಾನಂದ ಮತ್ತು ಕಲ್ಯಾಣಸ್ವಾಮಿ ಎಂಬ ಇಬ್ಬರು ದೊಡ್ಡ ಸೈನ್ಯವನ್ನು ಕಟ್ಟಿ (೧೮೩೫-೩೭) ಬ್ರಿಟಿಷರನ್ನು ಎದುರಿಸಿದರು. ಅವರು ಸುಳ್ಯ,

ಪುತ್ತೂರು, ಬಂಟವಾಳ, ಮಂಗಳೂರು, ಕಾಸರಗೋಡು ಇಲ್ಲೆಲ್ಲ ಪ್ರತಿ ಸರ್ಕಾರವನ್ನೆ ಸ್ಥಾಪಿಸಿದರು. ಬೆಳ್ಳಾರೆ, ಬಂಟ್ವಾಳ ಮತ್ತು ಕಾಸರಗೋಡು ಖಜಾನೆಗಳನ್ನು ಲೂಟಿ ಮಾಡಿದರು. ಬ್ರಿಟಿಷ್ ಕಲೆಕ್ಟರು ಮತ್ತು ಇತರ ಆಂಗ್ಲರು ತಮ್ಮ ಕುಟುಂಬಗಳೊಡನೆ ಮಂಗಳೂರಿನಿಂದ ಪಲಾಯನ ಮಾಡಿ ಹೊನ್ನಾವರದಲ್ಲಿ ರಕ್ಷಣೆ ಹೊಂದಿದರು. ಬ್ರಿಟಿಷರು ಅಪರಂಪರಾನಂದ ಸ್ವಾಮಿಯನ್ನು ಸೆರೆ ಹಿಡಿದರು. ಆದರೂ ದಂಗೆ ನಿಲ್ಲಲಿಲ್ಲ. ಆಗ ಜನತೆಗೆ ಮತ್ತೊಬ್ಬ ನಾಯಕ ಹುಟ್ಟಿಕೊಂಡನು. ಅವನ ಹೆಸರು ಪುಟ್ಟಬಸಪ್ಪ ಅಂದು. ಅವನ ಜೊತೆ ಬಂಗಾಡಿರಾಜಕುಮಾರ, ಗುಡ್ಡೆಮನೆ ಅಪ್ಪಯ್ಯ ಎಲ್ಲ ಸೇರಿ ಸರ್ಕಾರವನ್ನೇ ಕೆಲವು ಕಾಲ ಸ್ಥಗಿತಗೊಳಿಸಿದರು. ಬ್ರಿಟಿಷ್ ಸೈನ್ಯ ಪುಟ್ಟಬಸಪ್ಪ ಬಂಗಾಡಿರಾಜಕುಮಾರ ಮತ್ತು ಗುಡ್ಡೆಮನೆ ಅಪ್ಪಯ್ಯ ಎಲ್ಲರನ್ನೂ ಸೆರೆ ಹಿಡಿದು ಫಾಸಿಗೆ ಹಾಕಿದರು. ೧೮೪೧ರಲ್ಲಿ ಸುರಪುರದ ನಾಯಕರು, ಸಾತಾರೆಯ ನರಸಪ್ಪ ಪೇಟ್ಕಾರ ಎಂಬುವನಿಗೆ ಸಹಾಯ ಮಾಡಲು ಬ್ರಿಟಿಷರಿಗೆ ವಿರೋಧವಾಗಿ ಸೈನ್ಯವನ್ನು ಕಟ್ಟಿದ. ಬೀದರ್ ಜಿಲ್ಲೆಯಲ್ಲಿ ೧೮೫೩ರಲ್ಲಿ ಒಂದು ಸೈನ್ಯ ಲಿಂಗಪ್ಪ ಸರ್ದಾರನ ನೇತೃತ್ವದಲ್ಲಿ ಬ್ರಿಟಿಷರನ್ನು ಎದುರಿಸಿತು. ಬ್ರಿಟಿಷ್ ಸೈನ್ಯ ಅವನನ್ನೂ ಸೋಲಿಸಿತು.

ಭಾರತೀಯರ ಸ್ವಾತಂತ್ರ್ಯಾಭಿಲಾಷೆಯನ್ನು ಒಂದು ದಿನವೂ ಅಡಗಿಸುವುದು . ಬ್ರಿಟಿಷ್ ಸರ್ಕಾರಕ್ಕೂ ಸಾಧ್ಯವಾಗಲಿಲ್ಲ. ೧೮೫೭ರಲ್ಲಿ ನಡೆದ ಸಿಪಾಯಿ ದಂಗೆಯಲ್ಲಿ ಇದನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟವೆಂದು ಕರೆಯುತ್ತೇವೆ. ದೂರದ ದಕ್ಷಿಣದಲ್ಲಿದ್ದರೂ ಕರ್ನಾಟಕ ತನ್ನ ಪಾಲಿನ ಕರ್ತವ್ಯವನ್ನು ಸಲ್ಲಿಸಿತು. ಸುರಪುರ, ನರಗುಂದದ ರಾಜರು, ಹಲಗಲಿ ಬೇಡರು, ಧಾರವಾಡದ ದೇಸಾಯಿಗಳು, ಎಲ್ಲರೂ ಮುಂಡರಗಿ ಭೀಮರಾಯನ ನೇತೃತ್ವದಲ್ಲಿ ಬ್ರಿಟಿಷರನ್ನು ಎದುರಿಸಿದರು. ಕಾನ್ಪುರದಿಂದ, ಪೇಶ್ವೆ ನಾನಾ ರಾಯನೇ ಬರೆದ ಕೆಲವು ಪತ್ರಗಳು ಮುಂಡರಗಿ ಭೀಮರಾಯನಲ್ಲಿ ಸಿಕ್ಕಿದುವು. ಹಲಗಲಿ ಬೇಡರು ೫೦೦ ಯೋಧರು ಬಾಬಾಜಿ ನಿಂಬಾಳ್ಕರ್ ನೇತೃತ್ವದಲ್ಲಿ ಜಡಗಿಯ ಮತ್ತು ಬಾಳ್ಯ ಎಂಬುವರ ಮಾರ್ಗದರ್ಶನದಲ್ಲಿ, ತಮ್ಮಲ್ಲಿದ್ದ ಬಂದೂಕುಗಳನ್ನು ಸರ್ಕಾರಕ್ಕೆ ಒಪ್ಪಿಸಲು ನಿರಾಕರಿಸಿದರು. ಬ್ರಿಟಿಷ್ ಸೈನ್ಯವನ್ನು ಎದುರಿಸಿದ ಸಂದರ್ಭದಲ್ಲಿ ನಿಂಬಾಳ್ಕರ್ ವೀರ ಮರಣವನ್ನು ಅಪ್ಪಿದನು. ಬ್ರಿಟಿಷರು ೫೯೦ ಬೇಡರನ್ನು ಸೆರೆ ಹಿಡಿದರು. ಹತ್ತೊಂಬತ್ತು ಮಂದಿಯನ್ನು ಗಲ್ಲಿಗೆ ಹಾಕಿದರು. ಗಲ್ಲಿಗೆ ಹಾಕಿದವರ ಪೈಕಿ ಮುಖಂಡರಾದ ಜಡಗಿಯ ಮತ್ತು ಬಾಳ್ಯ ಇದ್ದರು. ಕರ್ನಾಟಕದಲ್ಲಿ ಬ್ರಿಟಿಷ್ ಸೈನ್ಯವನ್ನು ಎದುರಿಸಿದವರಲ್ಲಿ ಸುರಪುರದ ವೆಂಕಟನಾಯಕನೂ ಪ್ರಮುಖನಾಗಿದ್ದ. ಅವನು ನಾನಾಸಾಹೇಬ್ ಪೇಶ್ವೆಯೊಂದಿಗೆ ಸಂಪರ್ಕವಿಟ್ಟುಕೊಂಡಿದ್ದ. ೧೮೫೭ರಲ್ಲಿ ಬ್ರಿಟಿಷ್ ಕ್ಯಾಪ್ಟನ್ ವಿಂಡಹ್ಯಾಂ ಎಂಬುವನು ಸೈನ್ಯದೊಂದಿಗೆ ಬಂದು ಸುರಪುರಕ್ಕೆ ಮುತ್ತಿಗೆ ಹಾಕಿದನು. ಕೋಟೆಯಿಂದ ಗುಂಡು ಹಾರಿ ಬ್ರಿಟಿಷ್ ಕಮಾಂಡರ್‌ನನ್ನು ಕೊಂದಿತು. ಅನಂತರ ಕೋಟೆಯೊಳಗಿನ ದೇಶದ್ರೋಹಿಗಳ ಸಹಾಯದಿಂದಲೇ ಬ್ರಿಟಿಷರು ಕೋಟೆಯನ್ನು ಜಯಿಸಿ ವೆಂಕಟಪ್ಪ ನಾಯಕನನ್ನು ಹೈದರಾಬಾದು ತುರಂಗದಲ್ಲಿ ಸೆರೆಯಿಟ್ಟರು. ಅವನ ರಾಜ್ಯವನ್ನು ಅವನಿಗೆ ಹಿಂತಿರುಗಿಸುವುದಾಗಿಯೂ ಬ್ರಿಟಿಷರು ವಾಗ್ದಾನ ಮಾಡಿದ್ದರು. ಆದರೆ ನಾಯಕನ ಆತ್ಮಾಭಿಮಾನಕ್ಕೂ ಸ್ವಾತಂತ್ರ್ಯಕ್ಕೂ ಕುಂದುವುಂಟಾಗಿತ್ತು. ಅವನು ಸೆರೆಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ. ನರಗುಂದದ ಬಾಬಾ ಸಾಹೇಬನದೂ ಇದೇ ವೀರಕತೆ. ಅವನಲ್ಲಿದ್ದ ಆಯುಧಗಳು, ಫಿರಂಗಿ ಎಲ್ಲವನ್ನೂ ಒಪ್ಪಿಸುವಂತೆ ಬ್ರಿಟಿಷರು ಆಜ್ಞಾಪಿಸಿದರು. ಬಾಬಾ ಸಾಹೇಬನ ಸೈನಿಕರು ಬ್ರಿಟಿಷ್ ಕಮ್ಯಾಂಡರ್ ಮ್ಯಾನ್‌ಸನ್‌ನನ್ನು ಕೊಂದರು. ಬ್ರಿಟಿಷ್ ಸೈನ್ಯ ನರಗುಂದಕ್ಕೆ ಮುತ್ತಿಗೆ ಹಾಕಿ ಬಾಬಾ ಸಾಹೇಬನನ್ನು ಗಲ್ಲಿಗೆ ಹಾಕಿದರು. ಮುಂಡರಗಿ ಭೀಮರಾಯನು ಬ್ರಿಟಿಷರನ್ನು ೧೮೫೮ರಲ್ಲಿ ಎದುರಿಸಿದನು. ಮುಂಡರಗಿ ಭೀಮರಾವ್ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಮಾಡಿದ್ದನು. ಬ್ರಿಟಿಷರ ಸೈನ್ಯದಲ್ಲಿದ್ದವನು. ಆದರೆ ತೀವ್ರ ದೇಶಭಕ್ತಿಯಿಂದ ಸ್ವಾತಂತ್ರ್ಯವನ್ನು ಬಯಸಿದನು. ಗದುಗಿನ ಖಜಾನೆಯನ್ನು ಲೂಟಿ ಮಾಡಿದ. ಭೀಮರಾಯ ತಪ್ಪಿಸಿಕೊಂಡಿದ್ದವನು ಹೆಂಡತಿಯನ್ನು ಬ್ರಿಟಿಷರು ಸೆರೆ ಹಿಡಿದರೆಂದು ಕೇಳಿ "ಹೆಂಡಿರ ಸೆರೆಯನ್ನು ಕಂಡು ಬದುಕುವವನಲ್ಲ ಭೀಮರಾಯ" ಎಂದು ಹೇಳಿ ರಣಕ್ಕೆ ಹಿಂದಿರುಗಿದ. ಬ್ರಿಟಿಷರು ಅವನ ಕೋಟೆಗೆ ಮುತ್ತಿಗೆ ಹಾಕಿದರು. ಭೀಮರಾಯನೂ ಹಮ್ಮಿಗೆ ದೇಸಾಯಿ ಕೆಂಚನಗೌಡನೂ ಸ್ಥಳದಲ್ಲಿ ಮೃತನಾದರು. ಬ್ರಿಟಿಷ್ ಫಿರಂಗಿಗಳು ಮುತ್ತಿಗೆಯಲ್ಲಿ ೭೭ ಜನರನ್ನು ಕೊಂದವು.

ಭೀಮರಾಯನನ್ನು ಕುರಿತು ಲಾವಣಿಗಳೇ ಹುಟ್ಟಿದವು.

ಕಿತ್ತ ಕತ್ತಿ ಕೈ ಎತ್ತಿ ಸುತ್ತ ಮುತ್ತ
ಕೇಳುತಾನೆ ಭಂಟರನು
ಭೀಮರಾಯ ಕೂಡಿಹೋದೆದಾ ರಣ ಶೂರ
ತಡೆಯದೆ ಹಾರುತ್ತಿದ್ದವು ಶಿರಾ
ಹರಿಯುತಲೈತೋ ಕೆಂಪುನೆತ್ತರ
ಒಮ್ಮೆ ಗುಂಡು ಹಾರಿತೋ ಸಾವಿರ
ಹಮ್ಮಿಗೆ ದೇಸಾಯಿ, ಭೀಮರಾಯ
ಆದೇ ಕ್ಷಣಿಕೆ ಸಂಹಾರ

ಬ್ರಿಟಿಷರ ಸಾಮ್ರಾಜ್ಯ ನಿರ್ಮಾಣವನ್ನು ಸಶಸ್ತ್ರ ಯುದ್ಧದಲ್ಲಿ ಸಹ, ಕರ್ನಾಟಕ ಪ್ರಬಲ ರೀತಿಯಲ್ಲಿ ವಿರೋಧಿಸಿತು.

ಕಾಂಗ್ರೆಸ್ ಸಂಸ್ಥೆ ೧೯೨೦ರಲ್ಲಿ ಗಾಂಧೀಜಿಯ ನೇತೃತ್ವಕ್ಕೆ ಬಂದು, ಅಲ್ಲಿಂದ ಮುಂದೆ "ಭಾರತದಿಂದ ತೊಲಗಿ" ಚಳುವಳಿ ಪೂರ್ತಿ ಸ್ವಾತಂತ್ರ್ಯ ಹೋರಾಟದ ಎಲ್ಲ ಘಟ್ಟಗಳಲ್ಲಿಯೂ ಕರ್ನಾಟಕ ಪ್ರಮುಖ ಪಾತ್ರವನ್ನು ವಹಿಸಿತ್ತು. ಸ್ವಾತಂತ್ರ್ಯದ ಆಸೆ. ಅದಕ್ಕಾಗಿ ಹೋರಾಟ, ತ್ಯಾಗ, ಪ್ರಾಣಾರ್ಪಣೆ ಎಲ್ಲರಿಗೂ ಪ್ರಿಯವಾದ ಅದಮ್ಯ ಆಸೆಯೂ ಆಗಿತ್ತು. ಕರ್ನಾಟಕದವರು ಎಂದಿನಿಂದಲೂ ಕಲಿಗಳು, ದೊಡ್ಡ ದೊಡ್ಡ ಚಕ್ರಾಧಿಪತ್ಯಗಳನ್ನು ಕಟ್ಟಿ ಆಳಿದರು. ಸಶಸ್ತ್ರ ಹೋರಾಟದಲ್ಲಿ ಹೇಗೆ ಕರ್ನಾಟಕದವರು ಹಿಂದಾಗಿರಲಿಲ್ಲವೋ ಹಾಗೆಯೇ ಬ್ರಿಟಿಷ್ ಸಾಮ್ರಾಜ್ಯ ಭಾರತದಲ್ಲಿ ದೃಢ ತಳಹದಿಯ ಮೇಲೆ ನಿಂತ ಅನಂತರವೂ, ಅದನ್ನು ಎದುರಿಸುವ ಕಾಂಗ್ರೆಸ್ ಚಲುವಳಿಯಲ್ಲಿಯೂ ಕರ್ನಾಟಕ ಸದಾ ಮುಂಚೂಣಿಯಲ್ಲಿರುತ್ತಿತ್ತು. ೧೮೯೫ರಲ್ಲಿಯೇ ಕಾಂಗ್ರೆಸ್ ಧ್ಯೇಯವನ್ನು ಪ್ರಚಾರ ಮಾಡಿದೆ. ೧೮೯೫, ೧೯೦೩ ಈ ಸಂವತ್ಸರಗಳಲ್ಲಿ ಬೆಳಗಾವಿ ಧಾರವಾಡಗಳಲ್ಲಿ ರಾಜಕೀಯ ಸಮ್ಮೇಳನಗಳು ನಡೆದವು. ೧೮೯೫ರ ಸಮ್ಮೇಳನದ ಅಧ್ಯಕ್ಷರು ಸರ್ ದಿನ್‌ಷಾ ವಾಚಾ, ೧೯೦೩ರಲ್ಲಿ

ಫಿರೋಜ್‌ಶಾ ಮೆಹ್ತಾ ಅಧ್ಯಕ್ಷರಾಗಿದ್ದರು. ತಿಲಕರು ಈ ಸಭೆಗೆ ಬಂದಿದ್ದರು. ಬೆಳಗಾವಿ, ಧಾರವಾಡಗಳಲ್ಲಿ ರಾಜಕೀಯ ಸಮ್ಮೇಳನಗಳು ನಡೆದವು. ವಂಗ ವಿಭಜನೆಯ ಚಳುವಳಿಯಲ್ಲಿ ಬೆಳಗಾವಿ, ಧಾರವಾಡ, ಆಳ್ನಾವರ, ಗದಗ, ಬಾಗಲಕೋಟೆ, ಕಿತ್ತೂರು ಮುಂತಾದ ಕಡೆಗಳಲ್ಲಿ ಗೋವಿಂದ ರಾವ್ ಯಾಳ್ಗಿ, ಡಾ. ಜೋಶಿ ಇವರ ಮುಖಂಡತ್ವದಲ್ಲಿ ಅನೇಕರು ಹೆಂಡದಂಗಡಿಗಳನ್ನು ಪಿಕೆಟ್ ಮಾಡಿ ಸೆರೆಮನೆ ಸೇರಿದರು. ಲೋಕಮಾನ್ಯ ಬಾಲಗಂಗಾಧರ ತಿಲಕರ ಪ್ರಭಾವ, ಸ್ಫೂರ್ತಿ ಕರ್ನಾಟಕದ ಮೇಲೆ ತುಂಬ ಆಗಿತ್ತು. ಅವರ ಕೇಸರಿ, ಮರಾಠ ಪತ್ರಿಕೆಗಳು ಕರ್ನಾಟಕದಲ್ಲಿ ರಾಷ್ಟ್ರಪ್ರೇಮವನ್ನು ಹರಡಿದವು.

ಕಾಂಗ್ರೆಸಿಗೆ ತಿಲಕರ ಬೆಂಬಲಿಗರಾಗಿ ಆಲೂರು ವೆಂಕಟರಾವ್, ಆಗ್ನಾಚಾರ್ಯ, ಹೊಸಕೇರಿ, ಶ್ರೀನಿವಾಸ ರಾವ್ ಕೌಜಲಗಿ, ಗೋವಿಂದರಾವ್ ಯಾಳ್ಗಿ, ಗಂಗಾಧರ ರಾವ್ ದೇಶಪಾಂಡೆ ಇವರೆಲ್ಲ ಹೋಗಿದ್ದರು. ತಿಲಕರು ಕರ್ನಾಟಕಕ್ಕೆ ಪದೇ ಪದೇ ಭೇಟಿ ಕೊಡುತ್ತಿದ್ದರು. ೧೯೧೬ರಲ್ಲಿ ಬೆಳಗಾವಿ, ಬಳ್ಳಾರಿ, ಗುರ್ಲ, ಹೊಸೂರುಗಳಿಗೆ ಬಂದಿದ್ದರು. ಆಗಲೇ ಇವರು ಬೆಳಗಾವಿ ಕರ್ನಾಟಕಕ್ಕೆ ಸೇರಿದ್ದು ಎಂದು ಹೇಳಿದ್ದರು. ಹೋಮ್ ರೂಲ್‌ನ ಶಾಖೆಗಳನ್ನು ತೆರೆದರು. ಹದಿನಾರನೇ ಬೊಂಬಾಯಿ ಪ್ರಾಂತ ರಾಜಕೀಯ ಸಮ್ಮೇಳನ ೧೯೧೬ರಲ್ಲಿ ಬೆಳಗಾವಿಯಲ್ಲಿ ನಡೆಯಿತು. ಹದಿನೆಂಟನೆ ಸಮ್ಮೇಳನ ಬಿಜಾಪುರದಲ್ಲಿ ನಡೆಯಿತು. ಈ ಎರಡು ಸಭೆಗಳಿಗೂ ಗಾಂಧೀಜಿ ಬಂದಿದ್ದರು.

ಕರ್ನಾಟಕ ಪ್ರಾಂತದ ರಾಜಕೀಯ ಸಮ್ಮೇಳನ ೧೯೨೦ರಲ್ಲಿ ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ೧೯೨೦ರಲ್ಲಿಯೇ ಭಾರತೀಯ ಕಾಂಗ್ರೆಸ್ಸು, ಭಾಷಾವಾರು ಪ್ರಾಂತ ರಚನೆಯನ್ನು ಒಪ್ಪಿ ಕರ್ನಾಟಕಕ್ಕೆ ಒಂದು ಪ್ರಾಂತದ ಸ್ಥಾನವನ್ನು ಕೊಟ್ಟಿತು. ಗಂಗಾಧರರಾವ್ ದೇಶಪಾಂಡೆಯವರು ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ಮೈಸೂರು ಸಂಸ್ಥಾನ ರಾಜರ ಆಳ್ವಿಕೆಯಲ್ಲಿದ್ದರೂ, ಸ್ವಾತಂತ್ರ್ಯ ಚಳುವಳಿಯಲ್ಲಿ ಜನರು ಕಾಂಗ್ರೆಸ್ಸಿನ ಕಾರ್ಯಕ್ರಮಗಳೆಲ್ಲೆಲ್ಲ ಉತ್ಸಾಹದಿಂದ ಕೈಗೊಳ್ಳುತ್ತಿದ್ದರು. ಇಡೀ ಭಾರತಕ್ಕೇ ಮೊದಲನೆಯದಾಗಿ ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ, ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರ ಇವುಗಳನ್ನು ಮಹಾರಾಜರು ಕೊಟ್ಟಿದ್ದರು. ಕಾಂಗ್ರೆಸ್ಸು ಮೈಸೂರು ಸಂಸ್ಥಾನಕ್ಕೆ ಒಂದು ಸ್ಥಾನವನ್ನು ಕೊಟ್ಟು ನ್ಯಾಯಮೂರ್ತಿ ಸಟ್ಟೂರರನ್ನು ಅಧ್ಯಕ್ಷರನ್ನಾಗಿ ಮಾಡಿತ್ತು. ಸಂಸ್ಥಾನಗಳಲ್ಲಿ ನೇರವಾಗಿ ಹೋರಾಟವನ್ನು ಪ್ರಾರಂಭಿಸುವುದು ಕಾಂಗ್ರೆಸ್ಸಿನ ಉದ್ದೇಶವಾಗಿರಲಿಲ್ಲ. ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಗಳು ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿದ್ದವು.

ಭಾರತೀಯ ಕಾಂಗ್ರೆಸ್ಸಿನ ಹೋರಾಟ ದೇಶದಲ್ಲಿ ಗ್ರಾಮಾಂತರ ಪ್ರದೇಶಗಳಿಗೂ ಸಹ ಕಾಡ್ಗಿಚ್ಚಿನಂತೆ ಹಬ್ಬಿತು. ಒಬ್ಬ ಮನುಷ್ಯ ಒಂದು ಊರು ಎಂಬುದಿಲ್ಲ; ದೇಶಕ್ಕೆ ದೇಶವೇ ಹೋರಾಟದ ಕಣವಾಯಿತು. ಅಸಹಕಾರದ ಚಳುವಳಿಯಲ್ಲಿ (೧೯೨೦) ಗಾಂಧೀಜಿ ಬೆಂಗಳೂರಿಗೆ ಬಂದಿದ್ದರು. ಅದು ಖಿಲಾಫತ್ ಚಳುವಳಿಯ ಕಾಲ. ಮೌಲಾನಾ ಶೌಕತ್ ಅಲಿ, ಮಹಮ್ಮದ್ ಅಲಿ ಸಹ ಬಂದರು. ಹಿಂದೂ ಮುಸ್ಲಿಂ ಐಕ್ಯ, ಘೋಷವು ಬ್ರಿಟಿಷ್ ಸರ್ಕಾರವನ್ನು ಸಹ ತಲ್ಲಣಗೊಳಿಸಿತು. ಅಸಹಕಾರ ಚಳುವಳಿಯಲ್ಲಿ ಶಾಲಾ ಕಾಲೇಜುಗಳು ಮುಚ್ಚಲ್ಪಟ್ಟವು. ದತ್ತೋಪಂತ್ ಮಜಲಿ, ಕೃಷ್ಣರಾವ್ ಕಂಗುಪ್ಪೆ, ನಾರಾಯಣರಾವ್ ಜೋಶಿ, ಶ್ರೀನಿವಾಸ ರಾವ್, ಕೌಜಲಗಿ ದಿವಾನ್ ಸಾಹೇಬ್ ಜನವೇಕರ್, ಜಯ ರಾವ್ ದೇಶಪಾಂಡೆ, ರಂಗರಾವ್ ಪಿಲಗುಲ್, ಹನುಮಂತ ರಾವ್ ಕೌಜಲಗಿ, ಅನಂತರಾವ್ ಜಾಲಿಹಾಳ, ವೆಂಕಟೇಶ ಕುಲಕರ್ಣಿ, ಕಾರ್ನಾಡ್ ಸದಾಶಿವರಾವ್, ಕೆ. ಆರ್. ಕಾರಂತ, ಆಲೂರು ವೆಂಕಟರಾವ್ ಮುಂತಾದವರೆಲ್ಲ ನ್ಯಾಯಾಲಯಗಳನ್ನು ಬಹಿಷ್ಕರಿಸಿದರು. ಮದ್ಯದ ಅಂಗಡಿ, ಪರದೇಶಿ ವಸ್ತ್ರದ ಅಂಗಡಿ ಪಿಕೆಟಿಂಗ್ ಎಲ್ಲೆಲ್ಲಿಯೂ ನಡೆಯಿತು. ಧಾರವಾಡದಲ್ಲಿ ಪೋಲಿಸರು ಅಸಹಕಾರಿಗಳ ಮೇಲೆ ಗುಂಡು ಹಾರಿಸಿದರು. ಚಳುವಳಿ ಸರ್ವವ್ಯಾಪಿಯಾಗಿತ್ತು. ಅನೇಕ ನಿರಪರಾಧಿಗಳ ಕೊಲೆಯಾಯಿತು. ದಿವಾಕರ್, ಹುಕ್ಕೇರಿಕರ್, ಮುದವೀಡ್ಕರ್, ಮೊಹರೆ ಹಣಮಂತರಾಯ, ಚೌಡನಾಯಕ, ತಿಮ್ಮಪ್ಪ ನಾಯಕ, ಗಂಗಾಧರ್‌ರಾವ್ ದೇಶಪಾಂಡೆ ಮುಂತಾದ ಅಸಂಖ್ಯಾತ ಸಹಕಾರಿಗಳ ಬಂಧನವಾಯಿತು. ಬಳ್ಳಾರಿಯಲ್ಲಿ ಟೇಕೂರು ನಾರಾಯಣ ಶಾಸ್ತ್ರಿ, ಕಲ್ಲೂರು ಸುಬ್ಬರಾವ್, ಲಾಂಗ್ಲಿ ಭೀಮ ಸೇನರಾವ್ ಸೆರೆ ಸೇರಿದರು. ಡಿ. ಕೆ. ಭಾರದ್ವಾಜರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಧಿತರಾದರು. ೧೯೨೧ನೇ ನವೆಂಬರ್ ೧೭ರಂದು ವೇಲ್ಸ್ ರಾಜಕುಮಾರ ಭಾರತಕ್ಕೆ ಬಂದಾಗ ದೇಶದಲ್ಲಿ ಗೋಲಿಬಾರ್ ಆಗಿ ಖಿಲಾಫತ್ ಸತ್ಯಾಗ್ರಹಿಗಳು ಸತ್ತುದಲ್ಲದೆ ಅನೇಕರ ಬಂಧನವೂ ಆಯಿತು. ೧೯೨೧ರ ಅಸಹಕಾರ ಚಳವಳಿಯಲ್ಲಿ ಕಾಂಗ್ರೆಸ್ ಸಂದೇಶದಂತೆ ದೇಶಭಕ್ತರನೇಕರು ಸರ್ಕಾರೀ ಶಾಲೆಗಳನ್ನು ಸ್ಥಾಪಿಸಿದರು.

ಅಸಹಕಾರಿ ವಿದ್ಯಾರ್ಥಿಗಳನೇಕರು ಆ ಶಾಲೆಗಳನ್ನು ಸೇರಿದರು. ಅಸಹಕಾರ ಚಳವಳಿ ಉಲ್ಬಣವಾಗಿದ್ದರೂ, ನಾಗಪುರ ಕಾಂಗ್ರೆಸ್ಸಿನಲ್ಲಿ ಕರ್ನಾಟಕದವರ ಪಾತ್ರ ಪ್ರಾಮುಖ್ಯವಾಗಿತ್ತು. ಎಂಟುನೂರಕ್ಕಿಂತಲೂ ಹೆಚ್ಚು ಜನ ಪ್ರತಿನಿಧಿಗಳು ಕರ್ನಾಟಕದಿಂದಲೇ ಹೋಗಿದ್ದರು. ರಾಜಕೀಯವಾಗಿ ಅನೇಕ ಆಡಳಿತಗಳಲ್ಲಿ ಹಂಚಿಹೋಗಿರುವ ಕರ್ನಾಟಕವನ್ನು, ಕಾಂಗ್ರೆಸ್ ವ್ಯವಸ್ಥೆಯಲ್ಲಿ ಒಂದು ಪ್ರಾಂತವಾಗಿ ಮಾಡುವ ನಿರ್ಣಯ ನಾಗಪುರದಲ್ಲಿ ಅಂಗೀಕಾರ ವಾಗಬೇಕಾಗಿತ್ತು. ನಿರ್ಣಯ ಅಂಗೀಕಾರವಾಯಿತು. ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ವಾತಂತ್ರ್ಯದಷ್ಟೇ ಏಕೀಕರಣವೂ ಪ್ರಾಮುಖ್ಯ ವಾಗಿತ್ತು.

ನಾಗಪುರದಲ್ಲಿ (೧೯೨೩) ಕರ್ನಾಟಕದ ಸ್ವಯಂ ಸೇವಕರು ಸಕ್ರಿಯವಾಗಿ ಭಾಗವಹಿಸಿದ ಮತ್ತೊಂದು ಕಾಂಗ್ರೆಸ್ ಹೋರಾಟವೆಂದರೆ ಧ್ವಜ ಸತ್ಯಾಗ್ರಹ. ಆಗ ಕಾಂಗ್ರೆಸ್ ಧ್ವಜವನ್ನು ಹಾರಿಸುವುದೂ ರಾಜದ್ರೋಹವೆಂದು ಘೋಷಿಸಲಾಗಿತ್ತು. ಆ ನಿಷೇಧಾಜ್ಞೆಯನ್ನು ಎದುರಿಸಬೇಕೆಂದು ಕಾಂಗ್ರೆಸ್ ನಿರ್ಣಯಿಸಿತು. ಧ್ವಜಸತ್ಯಾಗ್ರಹವೆಂದು ಒಂದು ದಿನವನ್ನು ಕಾಂಗ್ರೆಸ್ ಘೋಷಿಸಿ ಎಲ್ಲ ಪ್ರಾಂತಗಳಿಂದಲೂ ಬಂದು ಸ್ವಯಂ ಸೇವಕರು, ನಿಷೇಧಾಜ್ಞೆಯಿದ್ದ ರಸ್ತೆಯಲ್ಲಿ ಧ್ವಜವನ್ನು ಹಿಡಿದು ನಡೆದು ಸತ್ಯಾಗ್ರಹ ಮಾಡಿದರು. ಪ್ರತಿದಿನವೂ ಪೋಲಿಸರು ಸ್ವಯಂ ಸೇವಕರನ್ನು ಹಿಡಿದು ಸೆರೆಮನೆಗೆ ಹಾಕುತ್ತಿದ್ದರು. ಇದು ಮೂರು ನಾಲ್ಕು ತಿಂಗಳು ನಡೆದು ಅನೇಕ ಸಾವಿರ ಸ್ವಯಂ ಸೇವಕರು ಬಂಧಿತರಾದ ಮೇಲೆ ಸರ್ಕಾರ ನಿಷೇಧಾಜ್ಞೆಯನ್ನು ತೆಗೆಯಿತು. ಈ ಸತ್ಯಾಗ್ರಹದಲ್ಲಿ ಬೆಂಗಳೂರಿನ ವಿ.

ಎಸ್. ನಾರಾಯಣ ರಾವ್ ಮುಂತಾದ ಅನೇಕ ಸ್ವಯಂ ಸೇವಕರು ಭಾಗವಹಿಸಿದರು.

೧೯೨೪ರಲ್ಲಿ ಬೆಳಗಾವಿಯಲ್ಲಿ ಗಾಂಧೀಜಿಯ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಿಂದ ಕನ್ನಡಿಗರ ರಾಷ್ಟ್ರೀಯತ್ವಕ್ಕೆ ಹೊಸ ಸ್ಫೂರ್ತಿ ದೊರೆಯಿತು. ಕಾಂಗ್ರೆಸ್ಸಿನ ಎಲ್ಲ ವಿಧಾಯಕ ಕಾರ್ಯಕ್ರಮ ಮತ್ತು ಹೋರಾಟಗಳಲ್ಲಿ ಅಹಿಂಸಾತ್ಮಕವಾಗಿ ಸಕ್ರಿಯವಾಗಿ ಭಾಗವಹಿಸುತ್ತಿದ್ದುದರಿಂದ ಕರ್ನಾಟಕಕ್ಕೆ ಗಾಂಧಿ ಪ್ರಾಂತವೆಂದೇ ಹೆಸರಾಯಿತು. ಅಸಹಕಾರ ಚಳುವಳಿಯಲ್ಲಿ ಮೈಸೂರು ಪ್ರಾಂತದಿಂದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಧಾರವಾಡದ ರಾಮಚಂದ್ರ ವಡವಿ, ಶಾಲೆ ಬಿಟ್ಟು ಗಾಂಧೀ ಆಶ್ರಮ ಮತ್ತು ಗುಜರಾತ್ ವಿದ್ಯಾಪೀಠ ಸೇರಿದರು.

೧೯೩೦ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹವೂ, ಕರ್ನಾಟಕದಲ್ಲಿ ತುಂಬ ಯಶಸ್ವಿಯಾಯಿತು. ಗಾಂಧೀಜಿ ದಂಡಿಯಲ್ಲಿ ಉಪ್ಪನ್ನು ತಯಾರಿಸಿದ ದಿನವೇ, ಕರ್ನಾಟಕದಲ್ಲಿಯೂ ಅಂಕೋಲದಲ್ಲಿ ಸಮುದ್ರ ತೀರದಲ್ಲಿ ನಲವತ್ತು ಸಾವಿರ ಜನರ ಸಮ್ಮುಖದಲ್ಲಿ ಸತ್ಯಾಗ್ರಹಿಗಳು ಉಪ್ಪನ್ನು ತಯಾರಿಸಿದರು. ಸಂತೆಗಳಲ್ಲಿ ಬಹಿರಂಗವಾಗಿಯೇ, ಪೋಲೀಸರ ಎದುರಿನಲ್ಲಿಯೇ ಕಾನೂನು ಬಾಹಿರ ಉಪ್ಪು, ಹೆಚ್ಚು ಬೆಲೆಯಲ್ಲಿ ಮಾರಾಟವಾಯಿತು. ಹಿಂದೆ ಹೆಸರಿಸಿದ ದೇಶಭಕ್ತರಲ್ಲದೆ ಉಮಾಬಾಯಿ ಕುಂದಾಪುರ, ನಾಡಕರ್ಣಿ ವಿದ್ಯಾನಂದ ಮುಂತಾದವರೆಲ್ಲ ಬಂಧಿತರಾದರು. ಸತ್ಯಾಗ್ರಹಿಗಳು ಸರ್ಕಾರದ ಉಪ್ಪಿನ ಕೋಠಿಗಳನ್ನು ವಶಪಡಿಸಿಕೊಂಡರು. ಹೀಗೆ ಉಪ್ಪಿನ ಕಾಯಿದೆ ನಾಮಾವಶೇಷವಾಯಿತು. ಇದೇ ಸಂದರ್ಭದಲ್ಲಿ ಡಾ. ಹರ್ಡೀಕರರು ಸೇವಾದಳವನ್ನು ಸ್ಥಾಪಿಸಿದರು. ಅದು ಹಿಂದೂಸ್ಥಾನದಲ್ಲೆಲ್ಲ ಪ್ರಸಿದ್ಧವಾಗಿ ಲಕ್ಷಾಂತರ ಜನ ಸೇರುತ್ತಿದ್ದ ಕಾಂಗ್ರೆಸ್ ಅಧಿವೇಶನದ ಅವಿಭಾಜ್ಯ ಅಂಗವಾಗಿ, ಸಮ್ಮೇಳನಗಳಲ್ಲಿ ಶಾಂತಿ ಮತ್ತು ಶಿಸ್ತಿನ ವಾತಾವರಣವನ್ನು ಕಲ್ಪಿಸುತ್ತಿದ್ದಿತು. ಗಾಂಧೀಜಿಯ ಚಳುವಳಿಗಳ ಮತ್ತೊಂದು ವಿಶೇಷವೆಂದರೆ, ಯಾವಾಗಲೂ ಹಿಂದೆ ಉಳಿದಿದ್ದ ಭಾರತದ ಸ್ತ್ರೀಯರು ಎಲ್ಲ ಚಳುವಳಿಗಳಲ್ಲಿಯೂ ಭಾಗವಹಿಸಿದುದು. ಹಿಂದೂ ದೇಶದ ಅಪಾರ ಸಂಖ್ಯೆಯ ಸ್ತ್ರೀಯರನ್ನು ರಾಜಕೀಯದಲ್ಲಿ ಪ್ರವೇಶಗೊಳಿಸಿದವರೇ ಗಾಂಧೀಜಿ. ಹಿಂದೆ ಬುದ್ಧ, ಈ ಕಾರ್ಯವನ್ನು ಮಾಡಿದ್ದ. ಗಾಂಧೀಜಿ ಅನುಸರಿಸಿದ ಸತ್ಯಾಗ್ರಹ, ಅಹಿಂಸೆ, ಶಿಸ್ತು, ಸೇವಾಭಾವನೆ ಧರ್ಮದ ಮೇಲೆ ಅವಲಂಬನೆ ಇವೆಲ್ಲ ಸ್ತ್ರೀಯರ ಸ್ವಭಾವಕ್ಕೆ ಹೊಂದಿಕೊಳ್ಳುತ್ತಿದ್ದುದರಿಂದ, ಸ್ತ್ರೀಯರು ಉತ್ತಮ ಸತ್ಯಾಗ್ರಹಿಗಳಾಗುತ್ತಿದ್ದರು. ಕರ್ನಾಟಕದ ಮಹಿಳೆಯರು ಗಾಂಧೀಜಿಯಿಂದಲೇ ಮೆಚ್ಚಿಕೆ ಮತ್ತು ಆಶೀರ್ವಾದವನ್ನು ಪಡೆದು ಧನ್ಯರಾದರು.

ಕರ್ನಾಟಕದಲ್ಲಿ ಬೃಹತ್ ಚಳುವಳಿ ನಡೆಯಿತು. ಕಾರ್ನಾಡ್ ಸದಾಶಿವರಾಯರು, ದಿವಾಕರ್ ನಾರಾಯಣರಾವ್ ಜೋಷಿ, ಶ್ರೀನಿವಾಸರಾವ್ ಕೌಜಲಗಿ, ಹುಕ್ಕೇರಿ ಎಲ್ಲ ಮಹದರೂ ಭಾಗವಹಿಸುತ್ತಿದ್ದರು. ಮೂವತ್ತು ಸ್ಥಳಗಳಲ್ಲಿ, ಗ್ರಹಿಗಳು ಉಪ್ಪನ್ನು ಅಕ್ರಮವಾಗಿ ತಯಾರಿಸಿದರು. ಶ್ರೀ ಮಹದೇವಿ ತಾಯಿ ಕಲ್ಲಮ್ಮ, ಕಾವೇರಮ್ಮ, ಗಂಗಾನಾಗೇಶ ಹೆಗಡೆ ಎಲ್ಲರೂ ಚಳುವಳಿಯಲ್ಲಿ ಸೇರಿದರು. ಮಂಗಳೂರು ಜಿಲ್ಲೆಯಲ್ಲಿಯೂ ಎಲ್ಲ ಚಳುವಳಿಗಳೂ ತಿಂಗಳಂತರದಲ್ಲಿ ನಡೆದವು.

ಎರಡನೆ ಮಹಾಯುದ್ಧ ಪ್ರಾರಂಭವಾದಾಗ ಸರಕಾರ ಯುದ್ಧದಲ್ಲಿ ಭಾರತವನ್ನು ಪ್ರವೇಶಗೊಳಿಸಿದುದು ಪ್ರತಿಭಟಿಸಿ ಯುದ್ಧ ವಿರೋಧಿ ವ್ಯಕ್ತಿ ಸತ್ಯಾಗ್ರಹವನ್ನು ಗಾಂಧೀಜಿಯ ಮುಖಂಡತ್ವದಲ್ಲಿ ಕಾಂಗ್ರೆಸ್ ಆರಂಭಿಸಿ ಅದನ್ನು ಪ್ರಾರಂಭಿಸುವವರು ಆದರ್ಶ ಸತ್ಯಾಗ್ರಹಿಯಾಗಿರಬೇಕಾಗಿತ್ತು. ಅಹಿಂಸೆ, ಅಸ್ಪೃಶ್ಯತಾ ವಿರೋಧ ಪಾನನಿರೋಧ, ಜಾತಿಭೇದ ವಿರೋಧಿ ಆಗಿರಬೇಕಾಗಿತ್ತು. ಮೊದಲ ಸತ್ಯಾಗ್ರಹಿಯನ್ನು ಗಾಂಧೀಜಿಯೇ ಆರಂಭಿಸಿದರು. ಅವರು ವಿನೋಬಾ ಭಾವೆ. ಪಂಡಿತ ಜವಾಹರಲಾಲ್‌ರು ಎರಡನೆ ಸತ್ಯಾಗ್ರಹಿ, ಸರ್ಕಾರ ಅವರಿಗೆ ನಾಲ್ಕು ವರುಷ ಕಠಿಣ ಶಿಕ್ಷೆ ವಿಧಿಸಿತು. ಈ ವ್ಯಕ್ತಿ ಸತ್ಯಾಗ್ರಹದ ಪ್ರತಿ ಪ್ರಾಂತದಲ್ಲಿಯೂ ಸಾವಿರಾರು ಜನ ಆರಿಸಿದ ವ್ಯಕ್ತಿಗಳು ಸೆರೆಯಾದರು. ಕರ್ನಾಟಕದಲ್ಲಿಯೂ ಎರಡು ಸಾವಿರ ಸ್ತ್ರೀ ಪುರುಷರು ಬಂಧಿತರಾದರು. ಕ್ವಿಟ್ ಇಂಡಿಯಾ ಚಳುವಳಿ ಪ್ರಾರಂಭವಾಗದಿದ್ದರೆ, ಯುದ್ಧ ನಡೆದಷ್ಟು ದಿನವೂ ಚಳುವಳಿಯೂ ನಡೆಯುತ್ತಿದ್ದಿತೇನೋ.

ಉಪ್ಪಿನ ಸತ್ಯಾಗ್ರಹ ಮತ್ತು ಕರನಿರಾಕರಣೆ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ೮೦೦ ಜನ ಸತ್ಯಾಗ್ರಹಿಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ೪೫೦, ಧಾರವಾಡ ಜಿಲ್ಲೆಯಲ್ಲಿ ೨೦೦, ದಕ್ಷಿಣ ಕನ್ನಡದಲ್ಲಿ ೧೬೦, ಬಿಜಾಪುರ ಜಿಲ್ಲೆಯಲ್ಲಿ ೧೬೦, ಕೊಡಗಿನಲ್ಲಿ ೪೦ ಮಂದಿ ಸೆರೆ ಸೇರಿದರು. ಬೆಳ್ಳಪ್ಪ, ಕರುಂಬಯ್ಯ, ಆರ್. ಕೃಷ್ಣಯ್ಯ ಪೂಣಚ ಮುಂತಾದವರು ಸೆರೆಯಾದರು. ಸರ್ಕಾರ ಕೊಡಗು ಪತ್ರಿಕೆಯ ಪ್ರಕಟಣೆಯನ್ನು ನಿಷೇಧಿಸಿತ್ತು. ಹಳೆ ಮೈಸೂರಿನವರು ವೆಂಕಟಕೃಷ್ಣಯ್ಯ, ಭಾಷ್ಯಂ ಇವರಿಂದ ಪ್ರೇರಿತರಾಗಿ ಅನೇಕರು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಆರೂರು ಗೂಡು ವೆಂಕಟಕೃಷ್ಣಯ್ಯ, ಟಿ. ಸದಾಶಿವ ಮುಂತಾದವರು ತಮಿಳುನಾಡಿನ ವೇದಾರಣ್ಯಮ ಸತ್ಯಾಗ್ರಹದಲ್ಲಿ ಸಹ ಭಾಗವಹಿಸಿದರು. ಅತ್ಯಂತ ಯಶಸ್ವಿಯಾಗಿ ಸರ್ದಾರ್ ವೀರ ಗೌಡ ಪಾಟೀಲರ ನೇತೃತ್ವದಲ್ಲಿ ನಡೆಯಿತು. ೧೯೩೦-೩೧ ಸತ್ಯಾಗ್ರಹದಲ್ಲಿ ಎರಡು ಸಾವಿರಕ್ಕಿಂತ ಹೆಚ್ಚು ಮಂದಿ ಸತ್ಯಾಗ್ರಹಿಗಳು ಸೆರೆವಾಸ ಅನುಭವಿಸಿದರು. ಸತ್ಯಾಗ್ರಹದ ಇತಿಹಾಸದಲ್ಲಿ ಕರ್ನಾಟಕಕ್ಕೆ ಸುವರ್ಣಕಲಶವಾದ ಮತ್ತೊಂದು ಸತ್ಯಾಗ್ರಹವೆಂದರೆ ಅಂಕೋಲ, ಸಿದ್ದಾಪುರ ಮುಂತಾದ ತಾಲೂಕುಗಳಲ್ಲಿ ನಡೆದಂತೆ ಕರನಿರಾಕರಣೆ ಚಳುವಳಿಯ ಉಪ್ಪಿನ ಸತ್ಯಾಗ್ರಹ ಜಯಪ್ರದವಾಗಿ ಮುಗಿದುದರಿಂದ ಜನತೆಗೆ ಸವಿನಯ ಕಾಯಿದೆ ಭಂಗದ ಶಿಸ್ತು, ಸಂಯಮದ ಅಹಿಂಸೆ, ತ್ಯಾಗ ಇವೆಲ್ಲಾ ಅಭ್ಯಾಸವಾಗಿದ್ದುವು. ಕರನಿರಾಕರಣ ಚಳುವಳಿಯನ್ನು ಅವರು ಪ್ರಾರಂಭಿಸಿದರು. ಆಯಾ ತಾಲೂಕಿನ ಜನತೆಯ ಜೊತೆಗೆ ಮೈಸೂರಿನ ಸರ್ದಾರ್ ಕೆ. ಎ. ವೆಂಕಟರಾಜಯ್ಯ (ದಂಪತಿಗಳು) ಎಂ. ಎನ್. ಜೋಯಿಸ್ (ದಂಪತಿಗಳು) ಪಾರ್ಥನಾರಾಯಣ ಪಂಡಿತರು ಎಲ್ಲ ಸೇರಿದರು. ಕರಾ ನಿರಾಕರಣೆ ಎಂದರೆ ಸರ್ಕಾರಕ್ಕೆ ಯಾವಾಗಲೂ ಗಾಬರಿ. ಎಲ್ಲೆಡೆಯೂ ಬಂಧನ, ನಿಷೇಧಾಜ್ಞೆ, ಬಾರಡೋಲಿಯನ್ನು ಬಿಟ್ಟರೆ ಭಾರತದಲ್ಲಿ ಮತ್ತಾವ ಕಡೆಯೂ ಅಂಕೋಲ ಸಿದ್ದಾಪುರ ಮುಂತಾದ ತಾಲೂಕುಗಳಲ್ಲಿ ನಡೆದಂತೆ ಕರನಿರಾಕರಣ ಚಳುವಳಿ ನಡೆಯಲೇ ಇಲ್ಲ.

ಬಾರಡೋಲಿಯಷ್ಟಲ್ಲಾದರೆ ಅಖಿಲ ಭಾರತ

ಪ್ರಸಿದ್ಧಿಯ ಮುಖಂಡ ಸರ್ದಾರ್ ಪಟೇಲರು ಇದ್ದರು. ಇಲ್ಲಿಯಾರೋ ನಮ್ಮ ನಮ್ಮವರೇ. ಆದರೆ ಅವರ ತ್ಯಾಗ, ಅಹಿಂಸೆ ಬಹಿಷ್ಕಾರಣೆಯ ಕಂದಾಯ ಕೊಡದ ರೈತರ ಜಮೀನು, ದನಕರುಗಳು, ಬಹಿಷ್ಕೃತ್ತು ಅವರ ಹೆಂಡತಿಯರ ಮಾಂಗಲ್ಯ ಎಲ್ಲವೂ ಹರಾಜಾದವು. ಹರಾಜಾದ ಪದಾರ್ಥಗಳನ್ನು ಯಾರೂ ಕೊಳ್ಳಲಿಲ್ಲ. ಸುಮಾರು ಎರಡು ಸಾವಿರ ಕುಟುಂಬಗಳವರು ಸರ್ವಸ್ವವನ್ನೂ ಕಳೆದುಕೊಂಡರು. ಈ ಅಹಿಂಸಾತ್ಮಕ ಚಳವಳಿ, ಸರ್ಕಾರದ ದೌರ್ಜನ್ಯದ, ಹಿಂಸಾಯುಕ್ತ ಪ್ರತೀಕಾರದ ಭಾವನೆಯನ್ನು ಎಷ್ಟರ ಮಟ್ಟಿಗೆ ಎತ್ತಿಗೆ ತೋರಿಸಿತೆಂದರೆ, ಇದನ್ನು ಕುರಿತು ಬೆಂಗಳೂರಿನ ಪ್ರಸಿದ್ಧ ಅಡ್ವೋಕೇಟ್ ದೇಶಭಕ್ತ ಸಂಪಿಗೆ ವೆಂಕಟಪತಯ್ಯನವರು ತಯಾರಿಸಿ ಕಳುಹಿಸಿದ ಒಂದು ವರದಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದಿತ್ತು. ಸರ್ಕಾರದ ಪ್ರತಿಬಂಧಕಾಜ್ಞೆಗಳೆಲ್ಲ ವಿರೋಧಿಸಿ ಜನ ಸಭೆಗಳನ್ನು ನಡೆಸುತ್ತಿದ್ದರು. ಈ ಒಂದು ಸತ್ಯಾಗ್ರಹವನ್ನು ಪ್ರತಿಬಂಧಿಸುವುದಕ್ಕಾಗಿಯೇ ವೈಸ್‌ರಾಯರು ಒಂಭತ್ತು ಸುಗ್ರೀವಾಜ್ಞೆಗಳನ್ನು ಹೊರಡಿಸಿದರು. ಸ್ತ್ರೀ ಸತ್ಯಾಗ್ರಹಿಗಳ ಮೇಲೆ ಲಾಠಿ ಪ್ರಹಾರ ನಡೆಯಿತು. ಎಷ್ಟು ಅವಿದ್ಯಾವಂತರಾಗಿರಲಿ ಬಡವರಾಗಿರಲಿ ಅವರು ಸರ್ವತ್ಯಾಗಕ್ಕೂ ಸಿದ್ಧರಾಗಿ ಆದರ್ಶ ಸತ್ಯಾಗ್ರಹಿಯಾದರೆ, ಬ್ರಿಟಿಷ್ ಸಾಮ್ರಾಜ್ಯದಂಥ ದೊಡ್ಡ ಪಾಶವೀ ಶಕ್ತಿಯನ್ನು ಸಹ ಸೋಲಿಸಬಲ್ಲರೆಂಬುದಕ್ಕೆ ಕರ್ನಾಟಕದ ಕರನಿರಾಕರಣೆಯ ವೀರಕಥೆಯೇ ಉದಾಹರಣೆ.

ಮೈಸೂರು ದೇಶ - ದೇಶಿಯ ಸಂಸ್ಥಾನವಾದರೂ ಇತರ ಸಂಸ್ಥಾನಗಳಂತಲ್ಲದೆ ರಾಜಕೀಯ ತುಂಬ ಜಾಗೃತಿ ಹೊಂದಿದ ರಾಜ್ಯವಾಗಿತ್ತು. ಇಲ್ಲಿನ ಮುಖಂಡರು ಭಾರತೀಯ ಕಾಂಗ್ರೆಸ್‌ನೊಂದಿಗೆ ಸದಾ ಸಂಪರ್ಕವಿಟ್ಟುಕೊಂಡಿದ್ದರು. ಆ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಗಳನ್ನಲ್ಲದೆ ರಾಜಕೀಯ ಹೋರಾಟವನ್ನೂ ಅನುಸರಿಸುತ್ತಿದ್ದರು. ಸಂಸ್ಥಾನಗಳು ತಮ್ಮ ಸ್ವಂತ ಕಾಂಗ್ರೆಸ್ ಸಮಿತಿಗಳನ್ನು ರಚಿಸಿಕೊಂಡು ಜವಾಬ್ದಾರ ಸರ್ಕಾರ ಸ್ಥಾಪನೆಗೆ ಹೋರಾಡಬೇಕೆಂದೂ ಅದರಿಂದ ಅವರ ಶಕ್ತಿ ಹೆಚ್ಚುವುದೆಂದೂ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆ ಸೂಚಿಸಿದವು. ಚೆಂಗಲ್‌ರಾಯರೆಡ್ಡಿ ಮತ್ತು ಎ. ವೆಂಕಟಪ್ಪನವರು ಪ್ರಜಾಪಕ್ಷವನ್ನು ವಿಸರ್ಜಿಸಿ ೧೯೩೭ರಲ್ಲಿ ಮೈಸೂರು ಕಾಂಗ್ರೆಸನ್ನು ಸ್ಥಾಪಿಸಿದರು. ಮೊದಲನೆಯ ಅಧಿವೇಶನ ಶಿವಪುರದಲ್ಲಿ ನಡೆಯಿತು. ಅಲ್ಲಿ ರಾಷ್ಟ್ರಧ್ವಜ ಸತ್ಯಾಗ್ರಹವಾಗಿ ನೂರಾರು ಜನರ ಬಂಧನವಾಯಿತು. ಜವಾಬ್ದಾರಿ ಸರ್ಕಾರದ ಘೋಷಣೆ ದೇಶದಲ್ಲಿ ಮೊಳಗಿತು. ಜನರ ಉತ್ಸಾಹ ಪ್ರಚಂಡವಾಗಿತ್ತು. ಎರಡನೆಯ ಕಾಂಗ್ರೆಸ್ ಅಧಿವೇಶನ ವಿದುರಾಶ್ವತ್ಥದಲ್ಲಿ ನಡೆಯಿತು. ಅಲ್ಲಿ ನಡೆದ ಪೊಲೀಸ್ ಗೋಲಿಬಾರ್‌ನಲ್ಲಿ ಅನೇಕರು ಹತರಾದರು. ಅದೇ ವರ್ಷ ಅರಣ್ಯ ಸತ್ಯಾಗ್ರಹ ನಡೆದು ಸಾವಿರಾರು ಜನರು ಬಂಧಿತರಾದರು. ಕೊಡಗಿನಲ್ಲಿಯೂ ಹೈದರಾಬಾದಿನಲ್ಲಿಯೂ ನೂರಾರು ಸತ್ಯಾಗ್ರಹಿಗಳ ಬಂಧನವಾಯಿತು. ಮಹಾರಾಜರ ಸರಕಾರ ಕೆ. ಆರ್. ಶ್ರೀನಿವಾಸ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಆಡಳಿತ ಸುಧಾರಣೆ ಸಮಿತಿಯನ್ನು ರಚಿಸಿತು. ಅದರ ಶಿಫಾರಸ್ಸನ್ನು ಕಾಂಗ್ರೆಸ್ ತಿರಸ್ಕರಿಸಿತು. ಬೆಂಗಳೂರು ಬಿನ್ನಿ ಗಿರಣಿಯ ಕಾರ್ಮಿಕರು ಭದ್ರಾವತಿ ಕಾರ್ಖಾನೆ ಮಾಲೀಕರು ಸರ್ಕಾರವನ್ನು ವಿರೋಧಿಸಿದರು. ಅವರ ಮುಷ್ಕರಗಳು ಎಪ್ಪತ್ತೈದು ದಿನ ನಡೆದುವು. ಸರ್ಕಾರ, ದಾಸಪ್ಪನವರ ವಕೀಲಿ ಅರ್ಹತೆಯನ್ನು ರದ್ದು ಮಾಡಿತು.

ಹೈದರಾಬಾದ್ ಕರ್ನಾಟಕದಲ್ಲಿ ಸಹ ಸ್ವಾತಂತ್ರ್ಯ ಚಳುವಳಿಯ ಎಲ್ಲ ಹಂತಗಳಲ್ಲಿಯೂ ರಾಮಾಚಾರ್ಯ, ರಮಾನಂದತೀರ್ಥ, ಮೇಲುಕೋಟೆ ಕೃಷ್ಣಾಚಾರ್ಯ, ಜನಾರ್ದನ ದೇಸಾಯಿ, ಮುಂತಾದವರು ಭಾಗವಹಿಸಿದರು. ಜಮಖಂಡಿ, ಮುಧೋಳ ಮೊದಲಾದ ರಾಜ್ಯಗಳಲ್ಲಿಯೂ ನಡೆಯಿತು. ಎಲ್ಲೆಲ್ಲಿಯೂ ಚಳುವಳಿಗಳು ಶಾಂತಿಯಿಂದ ವ್ಯವಸ್ಥಿತ ರೀತಿಯಲ್ಲಿ ನಡೆದವು. ಹಿಂಸಾ ಪ್ರಕರಣ ತುಂಬ ಅಪರೂಪವಾಗಿತ್ತು. ಪೊಲೀಸರು ಮತ್ತು ಸರ್ಕಾರರವೇ ಹಿಂಸೆಯ ಪ್ರತಿ ಕ್ರಿಯೆ ಆಚರಿಸಿತು. ಕ್ವಿಟ್ ಇಂಡಿಯಾ ಚಳವಳಿ ಕರ್ನಾಟಕದಲ್ಲಿ ಅತ್ಯಂತ ಪ್ರಜ್ವಲವಾಗಿ ಎದ್ದಿತು. ಚಳುವಳಿ ಬೆಳಗಾವಿ, ಧಾರವಾಡ, ಬೆಂಗಳೂರು ಮತ್ತು ಮೈಸೂರುಗಳಲ್ಲಿ ತುಂಬ ತೀವ್ರವಾಗಿತ್ತು. ಮೈಸೂರು ಕಾಂಗ್ರೆಸ್ಸಿನ ಎಲ್ಲ ಸದಸ್ಯರು ತಗಡೂರು ರಾಮಚಂದ್ರರಾಗಿಯಾಗಿ ಎಲ್ಲ ಕಾಂಗ್ರೆಸ್ಸಿಗರೂ, ಬಂಧಿತರಾದರು. ಎಲ್ಲೆಲ್ಲಿಯೂ ಸಭೆಗಳು. ಹೈದರಾಬಾದು, ಉತ್ತರ ಕರ್ನಾಟಕ, ಮಂಗಳೂರು, ಕೊಡಗು, ಎಲ್ಲೆಡೆಯೂ ಬಂಧನ, ಗೋಲೀಬಾರು, ಲಾಠಿ ಏಟು, ಸೆರೆಮನೆಗಳೂ ತುಂಬಿ ಹೋದುವು. ಅನೇಕ ಹಂಗಾಮಿ ಸೆರೆಮನೆಗಳೂ ಪಾಠಶಾಲೆ, ಪ್ರವಾಸಿ ಮಂದಿರ, ಛತ್ರಗಳಲ್ಲಿ ನಿರ್ಮಿತವಾದುವು. ಅನೇಕ ಊರುಗಳಲ್ಲಿ ಪ್ರತಿ ಸರ್ಕಾರಗಳು ಸ್ಥಾಪನೆಗೊಂಡವು. ಕರ್ನಾಟಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹಾಳಕೆರೆ ಸುಬ್ರಹ್ಮಣ್ಯ, ದಾಸಪ್ಪ, ವಿರಣ್ಣ ಗೌಡ, ಕೆ. ಹನುಮಂತಯ್ಯ, ಚೆಂಗಲರಾಯ ರೆಡ್ಡಿ, ನಿಜಲಿಂಗಪ್ಪ, ಸಾಹುಕಾರ ಚೆನ್ನಯ್ಯ, ಎಂ. ಟಿ. ರಾವ್‌ರಾವ್, ತಗಡೂರು ಎಲ್ಲರೂ ಬಂಧಿತರಾದರು. ಸಂತೆಗಳಲ್ಲಿ ಸುಂಕ ಕೊಡಲು ನಿರಾಕರಿಸಿದವರನ್ನೆಲ್ಲ ಸೆರೆಮನೆಗೆ ಕರೆತಂದು ಕೂಡಿ, ಬೆಳಿಗ್ಗೆ ಬಿಡುತ್ತಿದ್ದರು. ಕರ್ನಾಟಕದಲ್ಲಿಯೇ ಬಂಧಿತರಾದವರ ಸಂಖ್ಯೆ ಎಂಟು ಸಾವಿರಕ್ಕಿಂತ ಹೆಚ್ಚಾಗಿತ್ತು. ನಿತ್ಯ ಬೆಳಿಗ್ಗೆ ಬಂಧಿಸಿ ಸಂಜೆಗೆ ಬಿಡುತ್ತಿದ್ದವರ ಸಂಖ್ಯೆ ಇದರಲ್ಲಿ ಸೇರಿಲ್ಲ. ಈ ಚಳುವಳಿಯಲ್ಲಿಯೇ ಶಿವಮೊಗ್ಗ ಜಿಲ್ಲೆಯಲ್ಲಿ ಈಸೂರಿನಲ್ಲಿ ಅಧಿಕಾರಿಗಳ ಕೊಲೆಯಾಗಿ, ಅನಂತರ ಐವರು ಚಳವಳಿಗಾರರಿಗೆ ಫಾಸಿ ಆಯಿತು. ಅನೇಕ ಕೆಲಸಗಾರರು ಭೂಗತರಾಗಿ ಚಳುವಳಿ ನಡೆಸಿದರು. ರೈಲು ಕಂಬಿ ಕೀಳುವುದು, ಟೆಲಿಫೋನ್ ತಂತಿಗಳ ಹಾನಿ, ರೈಲ್ವೆ ಸ್ಟೇಷನ್ ಭಸ್ಮ, ಪೋಸ್ಟ್ ಆಫೀಸಿಗೆ ಬೆಂಕಿ, ಪಂಚಾಯ್ತಿ ಚಾವಡಿಗಳಿಗೆ ಬೆಂಕಿ, ಖಜಾನೆ ಲೂಟಿ, ಸಬ್‌ರಿಜಿಸ್ಟ್ರಾರ್ ಆಫೀಸಿಗೆ ಬೆಂಕಿ, ಸರ್ಕಾರಿ ದೌರ್ಜನ್ಯ ಮತ್ತು ಪ್ರತಿಹಿಂಸೆ ಮಿತಿಮೀರಿದ್ದುವು. ಶ್ರೇಷ್ಠ ಗಾಂಧೀ ಕಾರ್ಯಕರ್ತ ಮೈಲಾರ ಮಹದೇವಪ್ಪ ಮತ್ತು ಸಂಗಡಿಗರು ಗುಂಡಿಗೆ ಬಲಿ. ಬೆಂಗಳೂರು ಗುಂತಕಲ್ ರೈಲು ಎರಡು ವಾರ ನಿಂತಿತು. ಸರ್ಕಾರ ಎಲ್ಲೆಲ್ಲಿಯೂ ಪುಂಡು ಗಂದಾಯ ವಿಧಿಸಿತು. ಚಳುವಳಿಯನ್ನು ಅಡಗಿಸಲು ಸರ್ಕಾರ ಯೂರೋಪಿಯನ್ ಮಿಲಿಟರಿಯನ್ನು ನಿಯಮಿಸಬೇಕಾಯಿತು. ಕ್ವಿಟ್ ಇಂಡಿಯಾ ಚಳವಳಿಯನ್ನು ನಿಯಮಿಸಬೇಕಾಯಿತು. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮಹದೇವ ದೇಸಾಯಿ ಸೆರೆಮನೆಯಲ್ಲಿ ತೀರಿಕೊಂಡ ಸುದ್ದಿಯಿಂದ ಜನ ತುಂಬ ಅಶಾಂತಿಗೊಳಗಾದರು. ಅಂದು ಬೆಂಗಳೂರಿನಲ್ಲಿ ಮೈಸೂರು ಬ್ಯಾಂಕ್ ಚೌಕದಲ್ಲಿ ಅನೇಕರು ಪೊಲೀಸ್ ಗುಂಡಿನಿಂದ ಸತ್ತರು.

ಸಿಪ್ಪಾಗೆಯಲ್ಲಿ ಏಳು ಜನರ ಕೊಲೆಯಾಯಿತು. ಕರ್ನಾಟಕದಲ್ಲಿ ಈ ಚಳುವಳಿ ಒಂದು ವರ್ಷದವರೆಗೆ ನಡೆಯಿತು. ಸೆರೆಮನೆಯಲ್ಲಿದ್ದ ಗಾಂಧೀಜಿಗೆ ಸಂಗತಿ ತಿಳಿಯಲೇ ಇಲ್ಲ. ವಿಷಯ ಗೊತ್ತಾದಾಗ ಅವರು ಕೂಡಲೇ ಎಲ್ಲ ಭೂಗತ ಕಾರ್ಯಕರ್ತರೂ ವಿಧ್ವಂಸಕ ಕೃತ್ಯಗಳನ್ನು ನಿಲ್ಲಿಸಬೇಕೆಂದು ಸರ್ಕಾರಕ್ಕೆ ಶರಣಾಗತರಾಗಬೇಕೆಂದೂ ಹೇಳಿಕೆ ನೀಡಿದರು. ಅನಂತರ ದಿವಾಕರ್, ವೆಂಕಟರಾಮಯ್ಯ, ಎ. ಜಿ. ರಾಮಚಂದ್ರರಾವ್ ಮೊದಲಾದವರೆಲ್ಲ ಸರ್ಕಾರಕ್ಕೆ ಶರಣಾದರು. ಹಳೆಮೈಸೂರಿನಲ್ಲಿ ಸಹ ಭಾರತದಿಂದ ತೊಲಗಿ ಚಳುವಳಿಯಲ್ಲಿ ವಿಧ್ವಂಸಕೃತ್ಯವೆಸಗಿದ ಅನೇಕ ಉತ್ಸಾಹಿ ತರುಣರು ಬಂಧಿತರಾದರು. ಅವರ ಪೈಕಿ ಶಾಂತವೇರಿ ಮತ್ತು ಗೋಪಾಲಗೌಡ, ಎಲ್. ಟಿ. ಕಾರ್ಲ್ ಟೆಲಿಗ್ರಾಫ್ ತಂತಿ ಕತ್ತರಿಸಿ ಶಿಕ್ಷೆಗೆ ಒಳಗಾದರು.

೧೯೪೭ ಆಗಸ್ಟ್ ಮಧ್ಯರಾತ್ರಿ ಭಾರತ ಸ್ವತಂತ್ರವಾಯಿತು. ಸ್ವತಂತ್ರವಾದರೂ ದುರದೃಷ್ಟದ ದೇಶಿಯ ಸಂಸ್ಥಾನಗಳ ಪ್ರಜೆಗಳಿಗೆ ಇನ್ನೊಂದು ಹೋರಾಟ ಕಾದಿತ್ತು. ಅದುವೆ ಸಂಸ್ಥಾನದ ಅರಸರಿಂದ ಬಿಡುಗಡೆ. ನಮ್ಮ ಅರಸರು ಬ್ರಿಟಿಷ್ ಸರ್ಕಾರಕ್ಕಿಂತ ಕ್ರೂರರಾದರು. ಮೈಸೂರು ದೇಶದಲ್ಲಿ ದಿವಾನ್ ಅರ್ಕಾಟ್ ರಾಮಸ್ವಾಮಿ ಮೊದಲಿಯಾರರ ದಿವಾನ್‌ಗಿರಿಯಲ್ಲಿ ಮತ್ತೊಂದು ಸ್ವಾತಂತ್ರ್ಯ ಆಂದೋಳನ ನಡೆಯಬೇಕಾಯಿತು. ಈ ಚಳುವಳಿ ಸಹ ಅಹಿಂಸಾತ್ಮಕವಾಗಿ "ಪ್ಯಾಲೇಸ್ ಚಲೋ" "ಅರಮನೆ ಮುತ್ತಿ" ಎಂಬ ಘೋಷಣೆಯೊಂದಿಗೆ ಆರು ವಾರ ನಡೆಯಿತು. ರೈಲು ಸಿಬ್ಬಂದಿ, ಪೋಲೀಸು, ವಿದ್ಯಾರ್ಥಿಗಳು ಎಲ್ಲರೂ ಈ ಚಳುವಳಿಯಲ್ಲಿ ಸೇರಿದರು. ಪಟೇಲರೆಲ್ಲ ರಾಜೀನಾಮೆ ಇತ್ತರು. ದೇಶಾದ್ಯಂತ ಬಂಧನಗಳಾದವು. ಕೆಲವೆಡೆ ಗೋಲಿಬಾರನಿಂದ ಸತ್ಯಾಗ್ರಹಿಗಳೂ ವಿದ್ಯಾರ್ಥಿಗಳೂ ರೈತರೂ ಸತ್ತರು. ಹೆಚ್. ಎಸ್. ದೊರೆಸ್ವಾಮಿ ಮುಂತಾದವರು ಸಂಸ್ಥಾನದ ಹೊರಗೆ ನಿಂತು ಪ್ರಚಾರ ಮಾಡಿದರು. ಸರ್ಕಾರದ ಕೆಲಸ ಸ್ಥಗಿತವಾಯಿತು. ಶ್ರೀಮಾನ್ ಚೆಂಗಲರಾಯ ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಆರು ವಾರಗಳೊಳಗೆ ಸರ್ಕಾರ ನಿರುಪಾಯವಾಗಿ ಸೋತು, ಕಾಂಗ್ರೆಸ್ಸಿನೊಂದಿಗೆ ರಾಜಿಮಾಡಿಕೊಂಡಿತು. ಚೆಂಗಲರಾಯ ರೆಡ್ಡಿಯವರ ಮುಖ್ಯಮಂತ್ರಿತ್ವದಲ್ಲಿ ಜವಾಬ್ದಾರಿ ಸರ್ಕಾರದ ಪ್ರಥಮ ಮಂತ್ರಿಮಂಡಲ ಸ್ಥಾಪನೆಯಾಯಿತು.

ಸ್ವಾತಂತ್ರ್ಯ ದೊರೆತರೂ ಕನ್ನಡನಾಡಿನ ಏಕೀಕರಣ ಸಿದ್ಧಿಸಿರಲಿಲ್ಲ. ಕನ್ನಡಿಗರ ಬಯಕೆ ಎಂದಿನಿಂದಲೂ ಕನ್ನಡ ನಾಡು ಒಂದು ಪ್ರಾಂತವಾಗಿ ಒಂದು ಆಳ್ವಿಕೆಯಲ್ಲಿ ಏಕತಂತ್ರವಾಗಿ ಬರಬೇಕೆಂಬುದೇ ಆಗಿತ್ತು. ಸ್ವಾತಂತ್ರ್ಯ ಹೋರಾಟದ ಈ ಎಲ್ಲಾ ಸಂವತ್ಸರಗಳಲ್ಲಿಯೂ ಎಲ್ಲೆಡೆ ಇರುವ ಕನ್ನಡಿಗರೆಲ್ಲ ಸವ್ಯಸಾಚಿಗಳಾಗಿ ಸ್ವಾತಂತ್ರ್ಯ ಮತ್ತು ಏಕೀಕರಣಕ್ಕಾಗಿ ಒಟ್ಟಿಗೇ ಹೋರಾಡಿದರು. ಸಾಹಿತ್ಯ ಪರಿಷತ್ತು ಪ್ರತಿ ವರುಷವೂ ಏಕೀಕರಣ ಮಂತ್ರ ಜಪಿಸುತ್ತಲೇ ಇತ್ತು, ಸಾಹಿತಿಗಳಿಗೆಲ್ಲ ಇದೇ ಕನಸಾಗಿತ್ತು. ಕರ್ನಾಟಕ ಇಪ್ಪತ್ತೆರಡು ಆಳ್ವಿಕೆಗಳಲ್ಲಿ ಹಂಚಿಹೋಗಿತ್ತು. ಕೊನೆಗೆ ೧೯೫೬ರ ನವೆಂಬರ್ ಒಂದರಂದು ಕರ್ನಾಟಕ ರಚನೆಯಾಯಿತು. ಆಗ ಕಡಿದಾಳ ಮಂಜಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ನಮ್ಮ ಪ್ರಯಾಣದಲ್ಲಿ ಸ್ವಾತಂತ್ರ್ಯ ಮತ್ತು ಏಕೀಕರಣದ ಮಜಲನು ಮುಟ್ಟಿದೆವು. ಈ ಸಾಧನೆಯ ಕೀರ್ತಿ ಶ್ರೀಮಾನ್ ನಿಜಲಿಂಗಪ್ಪ, ಹನುಮಂತಯ್ಯ ಮತ್ತು ದೇವರಾಜ ಅರಸರಿಗೆ ಸೇರಬೇಕು.

ನಮ್ಮ ಪ್ರಾಂತ್ಯವೇನೋ ನಮಗೆ ಸಿಕ್ಕಿತು. ಕರ್ನಾಟಕ ಭಾರತದಲ್ಲಿ ಅತ್ಯಂತ ಶ್ರೇಷ್ಠವಾದ ಪ್ರಾಂತ. ಭಾರತಾಂಬೆಯ ಮುಕುಟದಲ್ಲಿ ಅನರ್ಘ್ಯ ರತ್ನ, ಹೇರಳವಾಗಿ ನೈಸರ್ಗಿಕ ಸಂಪತ್ತು ಇರುವ ರಾಷ್ಟ್ರ. ಕನ್ನಡಿಗರು ಇನ್ನೂ ಹೆಚ್ಚು ಸಾಹಸಪರರೂ ಪಟ್ಟು ಹಿಡಿದು ಕೆಲಸ ಮಾಡುವವರೂ ಆಗಬೇಕು. ಈ ಪ್ರಾಂತ ಗಾಂಧೀಜಿಗೆ ಪ್ರಿಯವಾಗಿತ್ತು. ಈಗ ಪಟ್ಟಣಗಳಿಗೇ ಹೆಚ್ಚು ಪ್ರಾಶಸ್ತ್ಯ ದೊರೆಯುತ್ತಿದೆ. ಗ್ರಾಮ ಕೈಗಾರಿಕೆ, ಗ್ರಾಮ ಸ್ವಾವಲಂಬನೆ, ಕೈಗಾರಿಕೆಗಳ ವಿಕೇಂದ್ರೀಕರಣ, ದುರ್ಬಲ ವರ್ಗಗಳ ಉನ್ನತಿ, ಬಡತನ ನಿರ್ಮೂಲನಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಬೇಕು. ಇದಕ್ಕಾಗಿ ಸರ್ಕಾರಗಳೂ ಪ್ರಜೆಗಳೂ ಶ್ರಮಿಸಬೇಕು.

(ಈ ಲೇಖನವನ್ನು ನನ್ನ ಸ್ವಂತ ಅನುಭವದಿಂದಲೂ, ಡಾ. ಸೂರ್ಯನಾಥ ಕಾಮತರ ಗ್ರಂಥದ ಆಧಾರದಿಂದಲೂ ಬರೆದಿದ್ದೇನೆ. ಅನೇಕ ಹೋರಾಟಗಾರರ ಹೆಸರು ಬಿಟ್ಟುಹೋಗಿದೆ. ಸಂಬಂಧಪಟ್ಟವರೆಲ್ಲ ಈ ಕೊರತೆಗಾಗಿ ನನ್ನನ್ನು ಮನ್ನಿಸಬೇಕು. ರಾವ್‌ಬಹದ್ದೂರರು ರಚಿಸಿದ "ಕರನಿರಾಕರಣೆಯ ವೀರಕಥೆ" ಆ ವಿಷಯಕ್ಕೆ ಅತಿ ಸಮರ್ಥ ಗ್ರಂಥ)


## MATRIMONIAL

Alliance for smarth Brahmin girl, slim 21 yeras, 5'-2 ½, Uttarshed, Harithsa Gotra, B.Sc., Diploma in Computer. Boy well qualified employed, 28 yeras or below, from good family background stationed at Bombay or near by, contact phone : 711-432384 or write to Box No.142.

***

Matrimonial alliance invited for a slim Kannada Hoysala Karnataka girl of 24 yeras 165 cms, Bharadwaja Gotra, Hasta Nakshtra. M.Sc. (Organic Chemistry). Please write Box 143.

***

Handsome dynamic software Engineer from Bombay/Bangalore 27/ 180cms. working at USA, smarth Babbur Kammi Brahmin, Gargasainsa Gotra, cultural family, arriving India Ist week of Oct' 97, immediately marriage seeks Tall, smart, matching girl with BE/MCA, please send Biodata horoscope, ready passport photograph with in eight days to Box No. 144.

***

Matrimonial alliance invited for Kannada speaking carer oriented Brahmin girl, age 27 years, Height 5'-5", Kaundinya Gotra, Architect, daughter of R. Nanjuda Shastry, Retd. Traffic accounts Officer, Videsh Sanchar Nigam Ltd. Mumbai, from well settled/self made Brahmin boys with professional qualifications - CA or MBA from Mumbai only. Please write Box No. 145.

## ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನ್ಯಾಯಾಂಗದ ಕೊಡುಗೆ!

# "ನ್ಯಾಯಪಥ"

● ಶಂಖನಾದ ಉಮೇಶ್

**ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶಾದ್ಯಂತ ಅನೇಕರು ಪಾಲ್ಗೊಂಡಿದ್ದಾರೆ. ಇವರಲ್ಲಿ, ನ್ಯಾಯಾಂಗಕ್ಕೆ ಸೇರಿದವರ ಕೊಡುಗೆ ಏನು ಎಂಬುದನ್ನು ಶ್ರೀ ಉಮೇಶ್ ಕುಲಕರ್ಣಿಯವರು ಈ ಲೇಖನದಲ್ಲಿ ನಮ್ಮ ಮುಂದಿಟ್ಟಿದ್ದಾರೆ.**

**ಉಮೇಶ್‌ರವರು ವೃತ್ತಿಯಿಂದ ಚಲನಚಿತ್ರ ನಿರ್ಮಾಪಕರು ಮತ್ತು ನಿರ್ದೇಶಕರು. (ರಾಷ್ಟ್ರಪತಿ ಪ್ರಶಸ್ತಿ ಪಡೆದ 'ಶಂಖನಾದ' ಇತ್ಯಾದಿ). ಅವರು ಸಂಗ್ರಹಿಸಿರುವ ವಸ್ತು, ಮೂಲತಃ ಸಾಕ್ಷ್ಯ ಚಿತ್ರಕ್ಕೆಂದು ರಚಿಸಲ್ಪಟ್ಟಿರುವುದು. ನಮ್ಮ ಕೋರಿಕೆಯ ಮೇರೆಗೆ ಅದನ್ನು ಮುದ್ರಣ ಮಾಧ್ಯಮಕ್ಕೆ ಅನುಗುಣವಾಗಿ ಮಾಡಿ ಕೊಟ್ಟಿದ್ದಾರೆ. ಇದು ಇವರ ಕೃತಿಯ ಮೊದಲನೆಯ ಕಂತು.**

ಈಗ ನಮ್ಮ ದೇಶ ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರೋ ಸಂದರ್ಭದಲ್ಲಿ ಈ ದೇಶದ ಮುಕ್ತಿ ಹೋರಾಟಕ್ಕೆ ನ್ಯಾಯಾಂಗ ನೀಡಿದ ಕೊಡುಗೆ ಏನು ಎಂಬುದು ಈಗ ಎದ್ದಿರುವ ಮಹತ್ವದ ಪ್ರಶ್ನೆ.

ನಮ್ಮ ನ್ಯಾಯಾಂಗಕ್ಕೆ ಅತ್ಯಂತ ಹಿರಿದಾದ ಇತಿಹಾಸ ಇದೆ. ಇಲ್ಲಿ ತಮ್ಮ ವೃತ್ತಿಗೆ, ತಮ್ಮನ್ನು ಶ್ರದ್ಧೆಯಿಂದ ಸಮರ್ಪಿಸಿಕೊಂಡ ಹಲವಾರು ನ್ಯಾಯಾಧೀಶರು ನ್ಯಾಯವಾದಿಗಳು ನ್ಯಾಯಪಥದಲ್ಲಿ ಸಾಗಿ ತಮ್ಮದೇ ಆದ, ಎಂದೂ ಅಳಿಸಲಾಗದ ಪದ ಚಿಹ್ನೆಗಳನ್ನು ಬಿಟ್ಟು ಹೋಗಿದ್ದಾರೆ.

ಇತಿಹಾಸ ಪಡೆದ ತಿರುವು, 1857ರ ಭಾರತದ ಮೊದಲ ಸ್ವಾತಂತ್ರ್ಯ ಹೋರಾಟ. ಈ ಕಿಚ್ಚನ್ನು ಕೊಳ್ಳಿಯಾಗಿ ಬಳಸಿ, ಭಾರತದ ಆಧ್ಯಾತ್ಮವನ್ನು ಜಾಗೃತಗೊಳಿಸಿದವರು. ಅರವಿಂದ, ವಿವೇಕಾನಂದ, ರಾಜಾರಾಂ ಮೋಹನ್‌ರಾಯ್, ದಯಾನಂದ ಸರಸ್ವತಿ ಇಂತಹ ಹಲವಾರು ರಸಋಷಿಗಳು. ಇದರ ಫಲವೇ ಧರ್ಮಭೂಮಿ, ಕರ್ಮಭೂಮಿಯಾಗಿ ಪರಿವರ್ತಿತವಾಗಿ, ಉಗ್ರವಾದಿಗಳು, ಸಶಸ್ತ್ರ ಬಲದವರು, ಕ್ರಾಂತಿಕಾರಿಗಳು, ಸೌಮ್ಯವಾದಿಗಳು ತಮ್ಮ ತಮ್ಮದೇ ಆದ ವಿಧಾಯಕ ಹಾಗು ವಿಧ್ವಂಸಕ ಮಾರ್ಗಗಳನ್ನು ಕಂಡುಕೊಂಡು ಚಲಿಸಿದರು. ಆದರೆ ಇವರೆಲ್ಲರ ಗುರು ಒಂದೇ ಸ್ವರಾಜ್ಯ ಆಗಿತ್ತು. ಈ ಕರೆಗೆ ಭಾರತೀಯ ಜನಸ್ತೋಮ ಪುಟಿದೆದ್ದು ನಿಂತಿತು.

ಇತಿಹಾಸದ ಈ ಕಾಲದ ಕರೆಗೆ ನ್ಯಾಯಾಂಗವೂ ಸೆಟೆದು ನಿಂತಿತು. ಈ ದೇಶದ ಅಸಂಖ್ಯಾತ ನ್ಯಾಯಾಧೀಶರು, ನ್ಯಾಯವಾದಿಗಳು ತಮ್ಮ ವೃತ್ತಿಗೆ ತಿಲಾಂಜಲಿ ನೀಡಿ, ನ್ಯಾಯ ದೇವತೆಯೂ ಅಭಿಮಾನ ಪಡೆವ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಅವರಲ್ಲಿ ಕೆಲವು ಪ್ರಮುಖರು ಇವರು. **ಸಯ್ಯದ್ ಅಹ್ಮದ್ ಖಾನ್‌**ರು ಸಮಾಜದಲ್ಲಿ ವ್ಯಾಪಿಸಿರುವ ಎಲ್ಲಾ ಸಾಮಾಜಿಕ ಆರ್ಥಿಕ, ರಾಜಕೀಯ ರೋಗಗಳಿಗೆ ಒಂದೇ ಮದ್ದು ಶಿಕ್ಷಣವೆಂದರಿತು, ಈ ದೇಶದ ಮುಸಲ್ಮಾನರು ಕಾಲದೊಂದಿಗೆ ಸರಿಯಾದ ಹೆಜ್ಜೆ ಹಾಕಲೆಂದೇ 1875ರಲ್ಲಿ "ಅಲಿಗಢ ಮೊಹಮ್ಮಡನ್ ಆಂಗ್ಲೋ ಓರಿಯೆಂಟಲ್ ಕಾಲೇಜು" ಸ್ಥಾಪಿಸಿದರು. 81ವರ್ಷಗಳ ಕಾಲ ಬದುಕಿದ ಇವರ ಕನಸು, ಮರಣಾನಂತರ 22 ವರ್ಷದ ಬಳಿಕ "ಅಲಿಗಢ್ ಮುಸ್ಲಿಮ ವಿಶ್ವವಿದ್ಯಾಲಯದ" ರೂಪ ಪಡೆಯಿತು.

**ಮೈಕೆಲ್ ಮಧುಸೂದನ್ ದತ್ತ**ರು ಧರ್ಮಾಂತರಗೊಂಡು, ಇಂಗ್ಲೆಂಡಿನಲ್ಲಿ ಕಾನೂನು ಅಧ್ಯಯನ ಮಾಡಿ, ಕಲ್ಕತ್ತಾ ಉಚ್ಚನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿದ್ದರೂ, ಮಾತೃಭಾಷಿ ಬಂಗಾಲಿಯಲ್ಲಿ ಮೂರು ನಾಟಕ, ಎರಡು ವ್ಯಂಗ್ಯ ರೇಖಾ ಚಿತ್ರ, ನಾಲ್ಕು ಕಾವ್ಯ ಗ್ರಂಥ ರಚಿಸಿ ಪ್ರಕಟಿಸಿ, ಬಂಗಾಲಿ ಸಾಹಿತ್ಯದಲ್ಲಿ ಕ್ರಾಂತಿ ಹಬ್ಬಿಸಿದರು. ರಾಷ್ಟ್ರಭಕ್ತಿಯ, ವಿವಾದಾತ್ಮಕವಾದ ದೀನಬಂಧು ಮಿತ್ರರು ರಚಿಸಿದ 'ನೀಲದರ್ಪಣ' ನಾಟಕ ಇಂಗ್ಲೀಷಿಗೆ ಅನುವಾದಿಸಿ ತಮ್ಮ 49 ವರ್ಷದ ಬದುಕನ್ನು ಸಾರ್ಥಕಗೊಳಿಸಿದರು.

ಚಟರ್ಜಿಯವರು ಕಲ್ಕತ್ತಾ ವಿಶ್ವ ವಿದ್ಯಾಲಯದಲ್ಲಿ ಪದವಿ ಪಡೆದು ಜಿಲ್ಲಾಧಿಕಾರಿಯಾಗಿ ಸರ್ಕಾರಿ ಸೇವೆ ಸಲ್ಲಿಸುತ್ತಲೇ, ಸಾಹಿತ್ಯ ರಚನೆಯಲ್ಲಿ ತೊಡಗಿದರು. ಕಾವ್ಯ, ನಾಟಕ, ನಿಬಂಧ, ರೇಖಾಚಿತ್ರ, ಸಂಶೋಧನಾ ಲೇಖನಗಳ ಜೊತೆ ಕಾದಂಬರಿ ಕ್ಷೇತ್ರದಲ್ಲಿ ಇಡೀ ಭಾರತದಲ್ಲಿ ಹೆಸರು ವಾಸಿಯಾದರು. ಅವರ 'ಆನಂದ ಮಠ' ಕಾದಂಬರಿಯಲ್ಲಿ ರಚಿಸಲಾದ ವಂದೇ ಮಾತರಂ ಗೀತೆ ದೇಶದ ಸ್ವಾತಂತ್ರ್ಯ ಹೋರಾಟಗಾರರಿಗೆ ಬೀಜ ಮಂತ್ರವಾಯಿತು. ಇಂದಿಗೂ ಅದಕ್ಕೆ ಇತಿಹಾಸದಲ್ಲಿ ರಾಷ್ಟ್ರಗಾನದ ನಂತರದ ರಾಷ್ಟ್ರಗೀತೆಯ ಗೌರವ ಸ್ಥಾನ.

**ಸರ್ ಫಿರೋಜ ಶಹಾ ಮೆಹ್ತಾ**ರವರು ಇಂಗ್ಲೆಂಡಿನಲ್ಲಿ ಕಾನೂನು ಅಧ್ಯಯನ ಮಾಡುವಾಗಲೇ ದಾದಾಭಾಯಿ ನವರೋಜಿ, ಇವರಿಗೆ ರಾಜಕೀಯ ಗುರುವಾದರು. ಭಾರತಕ್ಕೆ ಮರಳಿ ಮುಂಬಯಿಯಲ್ಲಿ ವಕೀಲಿ ವೃತ್ತಿ ಆರಂಭಿಸಿದರು. ಮುನ್ಸಿಪಲ್ ಆಕ್ಟ್ ರಚನೆಗೆ ಕಾರಣರಾಗಿ ಮುಂಬೈ ಕಾರ್ಪೋರೇಷನ್ನಿಗೆ ನಾಲ್ಕು ಬಾರಿ ಅಧ್ಯಕ್ಷರಾದರು. ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಸ್ಥಾಪಕರಲ್ಲಿ ಒಬ್ಬರಾದ ಇವರು, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ 'ದಿ ಬಾಂಬೇ ಕ್ರಾನಿಕಲ್' ಪತ್ರಿಕೆಯ ಸ್ಥಾಪಕರಾಗಿ, ಎಪ್ಪತ್ತು ವರ್ಷಗಳ ಕಾಲ ಬಾಳಿ ಬದುಕು ಧನ್ಯವಾಗಿಸಿಕೊಂಡರು.

**ಸುರೇಂದ್ರನಾಥ್ ಬ್ಯಾನರ್ಜಿ**ಯವರು ಐ.ಸಿ.ಎಸ್. ಪದವಿಗಳಿಸಿ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟ್ ಆಗಿ ಸೇವೆ ಸಲ್ಲಿಸುವಾಗ ಬ್ರಿಟಿಷ್ ಸರ್ಕಾರವೇ ಇವರ ಮೇಲೆ ಅಪಾದನೆ ಹೊರಿಸಿ ಸೇವೆಯಿಂದ ವಜಾ ಮಾಡಿತು. ಈ ತಿರುವು ಭಾರತೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಫಲಕಾರಿಯಾಯಿತು. ಇವರು ತಕ್ಷಣ ಇಡೀ ದೇಶದ ಪ್ರವಾಸ ಮಾಡಿ, ತಮ್ಮ ವಾಕ್ ಪಟುತ್ವ ಹಾಗೂ ದೂರ ದೃಷ್ಟಿಯಿಂದಾಗಿ ರಾಷ್ಟ್ರಮಟ್ಟದ ಹೋರಾಟ ನಿಧಿ ಸಮಿತಿ ರಚಿಸಿ, ಧನ ಸಂಗ್ರಹಿಸಿದರು. ಇದೇ ಭಾವನೆ ಮುಂದೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ಬುನಾದಿ ಹಾಕಿತು. ಇವರು ಸಾಹಿತಿ, ಪತ್ರಕರ್ತರಾಗಿ ದುಡಿದು 'ದಿ ಟ್ರಿಬ್ಯೂನಲ್ ಆಫ್ ಪೀಪಲ್' ಪ್ರಶಸ್ತಿ ಗಳಿಸಿ, 77 ವರ್ಷ ಬಾಳಿದರು

ಬಾಲಗಂಗಾಧರ ತಿಲಕರು - 'ಕೇಸರಿ' 'ಮರಾಠಾ' ದಂತಹ ತೇಜಸ್ವಿ ಪತ್ರಿಕೆಗಳನ್ನು ನೀಡಿದ ಇವರ ಮೇಲೆ, ರಾಜದ್ರೋಹದ ಮೊಕದ್ದಮೆಯನ್ನು ಬ್ರಿಟಿಷ್ ಸರ್ಕಾರ ಹೂಡಿದಾಗ, ತಾವೇ ಪ್ರತಿವಾದಿ ಭಯಂಕರರಾಗಿ ವಾದಿಸಿ, ಒಂದೂವರೆ ವರ್ಷದ ಜೈಲು ಶಿಕ್ಷೆ ಅನುಭವಿಸಿದರು. ಅವರು 'ರಚಿಸಿದ ವೇದ ಗ್ರಂಥ ಕುರಿತ ಸಾಹಿತ್ಯ ವಿಶ್ವಮಾನ್ಯ. ಮಾಂಡಲೇ ಜೈಲಿಗೆ 6 ವರ್ಷಗಳ ಗಡೀಪಾರು ಶಿಕ್ಷೆಗೆ ಕಳಿಸಿದಾಗ ಅಲ್ಲೂ 'ಗೀತಾ ರಹಸ್ಯ' ಕೃತಿ ರಚಿಸಿದರು. ಮತ್ತೆ ಬಿಡುಗಡೆ ಹೊಂದಿ, ಹೋಂ ರೂಲ್ ಚಳುವಳಿ ರೂಪಿಸಿ, 'ಸ್ವರಾಜ್ಯ ನನ್ನ ಜನ್ಮಸಿದ್ಧ ಅಧಿಕಾರ, ಅದನ್ನು ನಾನು ಪಡೆದೇ ತೀರುವೆ' ಎಂದು ಗುಡುಗಿ, 64 ವರ್ಷದ ಜೀವನವನ್ನು ದೇಶಸೇವೆಗೆ ಶ್ರೀಗಂಧದಂತೆ ಸವೆಸಿದರು.

ಸ್ವಾಮಿ ಶ್ರದ್ಧಾನಂದರ ಮೂಲ ಹೆಸರು ಮುಂಶಿರಾಮ್ ಲಾಹೋರಿನಲ್ಲಿ ವಕೀಲಿ ಪರೀಕ್ಷೆ ಮುಗಿಸಿ, ಸಂಸಾರದಲ್ಲಿ ಆಸಕ್ತಿ ಕಳೆದುಕೊಂಡು, ದಯಾನಂದ ಸರಸ್ವತಿ ಪ್ರಭಾವಕ್ಕೆ ಒಳಗಾಗಿ, 61ನೇ ವಯಸ್ಸಿನಲ್ಲಿ ಸನ್ಯಾಸಿಯಾಗಿ 'ಸ್ವಾಮಿ ಶ್ರದ್ಧಾನಂದ'ರಾದರು. ಹರಿದ್ವಾರದಲ್ಲಿ ಗುರುಕುಲ ಸ್ಥಾಪಿಸಿದರು. ಶ್ರದ್ಧಾನಂದರು ಹಿಂದಿ, ಉರ್ದುವಿನಲ್ಲಿ 'ಅರ್ಜುನ್' 'ತೇಜ' ಸಮಾಚಾರ ಪತ್ರಿಕೆ ಪ್ರಕಟಿಸಿದರು. ಹಿಂದೂ ಮುಸ್ಲಿಂ ಐಕ್ಯತೆ ನಂಬಿದ ಈ ಮುನಿಯು ಒಬ್ಬ ಧರ್ಮಾಂಧನಿಂದ 64ನೇ ವಯಸ್ಸಿನಲ್ಲಿ ಸಾವನ್ನಪ್ಪಿದರು.

ಶ್ಯಾಮಜೀ ಕೃಷ್ಣ ವರ್ಮ ಗುಜರಾತಿನವರು. ವಿದೇಶದಲ್ಲಿದ್ದೇ ಭಾರತದ ಬಿಡುಗಡೆಗಾಗಿ ಶ್ರಮಿಸಿದರು. ಇಂಗ್ಲೆಂಡಿನಲ್ಲಿ ಭಾರತದ ಮೊಟ್ಟ ಮೊದಲ ಬ್ಯಾರಿಸ್ಟರ್ ಎಂದು ಖ್ಯಾತಿ ಪಡೆದರು. ಭಾರತಕ್ಕೆ ಬಂದು ಅಜ್ಮೀರ್‌ನಲ್ಲಿ ವಕೀಲಿ ಆರಂಭಿಸಿದರು. ಮತ್ತೆ ಇಂಗ್ಲೆಂಡಿಗೆ ಮರಳಿದಾಗ ಕ್ರಾಂತಿಕಾರಿ ಮಾಸಪತ್ರಿಕೆ ಪ್ರಕಟಿಸಿದರು. ಅನೇಕ ಕ್ರಾಂತಿಕಾರಿಗಳಿಗೆ ನೆಲೆ ಒದಗಿಸಲು ಇವರ ರಾಜಕೀಯ ಚಟುವಟಿಕೆ ಸಹಿಸಲಾಗದೇ, ಅಲ್ಲಿನ ಸರ್ಕಾರ ದೇಶದಿಂದ ಹೊರ ಹಾಕಿತು. ಆಗ ಪ್ಯಾರಿಸ್‌ಗೆ ಹೋಗಿ ನೆಲೆಸಿದರು. ಕೊನೆಗೆ ಸ್ವಿಟ್ಜರ್‌ಲ್ಯಾಂಡಿನ ಜಿನೇವಾಕ್ಕೆ ವಲಸೆ ಹೋಗಿ, ತಮ್ಮ 73ನೇ ವರ್ಷದಲ್ಲಿ ಅಸುನೀಗಿ ಅಮರರಾದರು.

ಮೋತಿಲಾಲ್ ನೆಹರುರವರು ಕಾನ್‌ಪುರ, ಅಲಹಾಬಾದ್‌ನಲ್ಲಿ ಕಾನೂನು ವೃತ್ತಿಯಲ್ಲಿ ತೊಡಗಿದ್ದರು. ಈ ಸೌಮ್ಯವಾದಿ, ಹೋಂ ರೂಲ್ ಲೀಗ್‌ನಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆದರೆ ರೌಲೆಟ್ ಆ್ಯಕ್ಟ್, ಜಲಿಯನ್‌ವಾಲಾಬಾಗ್‌ನ ಘಟನೆ, ಇವರಲ್ಲೂ ರಾಷ್ಟ್ರ ಭಕ್ತಿಯ ಕಿಚ್ಚನ್ನು ಭುಗಿಲೆಬ್ಬಿಸಿತು. ಅನಾರೋಗ್ಯ, ಸೊಸೆ ಕಮಲಾ ನೆಹರುರವರ ಸಾವು, ಇಂತಹ ದುರಂತಗಳ ನಡುವೆಯೂ ಹುತಾತ್ಮ ದಿನಾಚರಣೆ ಆಚರಿಸಿದ್ದರು. 70 ವರ್ಷದ ಇವರು ಇವರ ಬದುಕು ಸ್ಫೂರ್ತಿಯ ಸೆಲೆ.

ಮದನ್ ಮೋಹನ್ ಮಾಲವೀಯರು ಅಲಹಾಬಾದಿನಲ್ಲಿ ಜನಿಸಿದರು. ಈ ಕರ್ಮಠ ಹಿಂದೂ ಬದುಕಿದ್ದು 85 ವರ್ಷಕಾಲ. ನಮ್ಮ ಸಂಸ್ಕೃತಿ ಮತ್ತು ಸಂಸ್ಕೃತ ಭಾಷೆ ಅಮರವಾಗಿ ಉಳಿಯಲು, 'ಬನಾರಸ್ ಹಿಂದೂ ವಿಶ್ವವಿದ್ಯಾಲಯ ಸ್ಥಾಪಿಸಿದ್ದು, ಇವರು ದೇಶಕ್ಕೆ ನೀಡಿದ್ದ ಅಮೂಲ್ಯ ಕೊಡುಗೆ. ಇವರು ಉತ್ತಮ ಪತ್ರಕರ್ತರೂ ಹೌದು. 30ನೇಯ ವಯಸ್ಸಿನಲ್ಲಿ ಕಾನೂನು ಪದವಿ ಗಳಿಸಿ ಕಾಂಗ್ರೆಸ್ ಪಕ್ಷಕ್ಕೆ 3 ಬಾರಿ ಚುನಾಯಿತ ಅಧ್ಯಕ್ಷರಾದರು.

ಡಾ। ಅಶುತೋಶ್ ಮುಖರ್ಜಿಯವರಿಗೆ ಬಾಲ್ಯದಲ್ಲಿ ಗಣಿತದಲ್ಲಿ ಆಸಕ್ತಿ. ಆದರೆ ಪಡೆದದ್ದು ಕಾನೂನಿನಲ್ಲಿ ಡಾಕ್ಟರೇಟ್. ಕಲ್ಕತ್ತಾ ಹೈಕೋರ್ಟಿನಲ್ಲಿ ವಕೀಲಿ ಆರಂಭ, 40ನೇಯ ವಯಸ್ಸಿನಲ್ಲಿ, ಹೈಕೋರ್ಟಿನ ನ್ಯಾಯಾಧೀಶರಾಗಿ ಮುನ್ನಡೆ. ತಮ್ಮ ವೃತ್ತಿಯಲ್ಲಿ 20 ವರ್ಷ ಸೇವೆ ಸಲ್ಲಿಸುತ್ತಲೇ, ಇಂಡಿಯನ್ ಸೈನ್ಸ್ ಕಾಂಗ್ರೆಸ್ಸಿನ ಸ್ಥಾಪಕ ಅಧ್ಯಕ್ಷ, ಎಡಿನ್‌ಬರ್ಗ್ ರಾಯಲ್ ಸೊಸೈಟಿಯ ಫೆಲೋಶಿಪ್ ಗೌರವ ಪಡೆದು, 60 ವರ್ಷ ಬಾಳಿದ ಸಾರ್ಥಕ ಜೀವ.

ಲಾಲಾ ಲಜಪತ್‌ರಾಯರು ಪಂಜಾಬಿನಲ್ಲಿ ಜನಿಸಿ, 18ನೇ ವಯಸ್ಸಿಗೆ ಲಾ ಪದವಿ ಗಳಿಸಿ ಹಿಸ್ಸಾರ್‌ನಲ್ಲಿ ವಕೀಲಿವೃತ್ತಿ ಆರಂಭಿಸಿರು. 23ನೇ ವಯಸ್ಸಿಗೆ ಕಾಂಗ್ರೆಸ್ ಪಕ್ಷ ಸೇರಿ, ಬ್ರಿಟಿಷ್ ಜನಾಭಿಪ್ರಾಯವನ್ನು ಭಾರತ ಪರ ಮೂಡಿಸಲು, ಇಂಗ್ಲೆಂಡಿಗೆ ಪಯಣ. ಮರಳಿ ಬಂದ ಮೇಲೆ ಬರ್ಮಾಕ್ಕೆ ಗಡೀಪಾರು ಮಾಡಿತು ಸರ್ಕಾರ. ಸೈಮನ್ ಕಮಿಷನ್ ವಿರುದ್ಧ ಪ್ರತಿಭಟಿಸುವಾಗ, ಪೋಲೀಸರ ಲಾಠಿ ಏಟಿಗೆ ಈಡಾಗಿ, 65ನೆಯ ವಯಸ್ಸಿನಲ್ಲಿ ನಿಧನರಾದರು ಈ ನ್ಯಾಯವಾದಿ.

ಮಜರುಲ್ ಹಕ್ ಬಿಹಾರದವರು. [illegible]ನೇ ವಯಸ್ಸಿಗೆ ಇಂಗ್ಲೆಂಡಿನಲ್ಲಿ ಕಾನೂನು ಅಧ್ಯಯನ ಮುಗಿಸಿ, ಭಾರತದಲ್ಲಿ 'ಅವಧ್'ಗೆ ಮುನ್ಸೀಫರಾದರು. ನಂತರ ರಾಜೀನಾಮೆ ನೀಡಿ ಛಾಪ್ರಾದಲ್ಲಿ ವಕೀಲಿ ಆರಂಭಿಸಿದರು. ಈ ರಾಷ್ಟ್ರೀಯವಾದಿ ಖಿಲಾಫತ್ ಹಾಗೂ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಲು ವಕೀಲಿ ವೃತ್ತಿ ತೊರೆದರು. ಕಡ್ಡಾಯ ಹಾಗೂ ಉಚಿತ ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡಿದರು. ಕವಿ, ಲೇಖಕ ಪತ್ರಕರ್ತನಾಗಿ, 64 ವರ್ಷದ ತುಂಬು ಜೀವನದ ಬದುಕು ಇವರದು.

ಲಕ್ಷ್ಮೀನಾಥ್ ಬೇಜ್‌ಬರ್ವಾರವರು ಕಲ್ಕತ್ತಾದಲ್ಲಿ ಕಾನೂನು ಓದಿದರೂ ನಾಟಕ, ಕಥೆ, ಕವಿತೆ ವಿಮರ್ಶೆಯಿಂದಾಗಿ ಅಸ್ಸಾಮಿ ಸಾಹಿತ್ಯದಲ್ಲೊಂದು ವಿಶೇಷ ಸ್ಥಾನ ಇವರ ಕೃತಿಗಳಿಗೆ. ಕವಿ ರವೀಂದ್ರರ ಮನೆತನದಲ್ಲಿ ಮದುವೆಯಾದ ಇವರು ಬಾನ್ಹಿ ಎಂಬ ಸಾಹಿತ್ಯಿಕ ಮಾಸ ಪತ್ರಿಕೆ ಪ್ರಕಟಿಸಿದರು. ಆಧುನಿಕ ಅಸ್ಸಾಮಿನ ಈ ನಾಯಕ ಬದುಕಿದ್ದು 70 ವರ್ಷ ಮಾತ್ರ.

ಚಿತ್ತರಂಜನದಾಸರು 22ನೆಯ ವಯಸ್ಸಿಗೆ ಇಂಗ್ಲೆಂಡಿನಿಂದ ಕಾನೂನು ಪದವಿ ಗಳಿಸಿ ಮರುವರ್ಷವೇ ಕಲ್ಕತ್ತಾ ಹೈಕೋರ್ಟಿನಲ್ಲಿ ವಕೀಲಿ ವೃತ್ತಿ ಆರಂಭಿಸಿದರು. ಬ್ರಿಟಿಷ್ ಕಾನೂನುಗಳ ಅಗಾಧ ಜ್ಞಾನ ಬಳಸಿ ಅನೇಕ ಸ್ವಾತಂತ್ರ್ಯ ವೀರರಿಗೆ ಹಾಗೂ ಅಲಿಪೋರ್ ಬಾಂಬ್ ಪಿತೂರಿ ಪ್ರಕರಣದಲ್ಲಿ ಅರವಿಂದ್ ಘೋಷ್‌ರ ಪರವಾಗಿ ವಕಾಲತ್ತು ಮಾಡಿದಾಗ ಇಡೀ ದೇಶ ಒಕ್ಕೊರಲಿನಿಂದ 'ದೇಶಬಂಧು' ಎಂದು ಗುರುತಿಸಿ, ಗೌರವಿಸಿತು. ಈ ಕವಿ, ಪತ್ರಕರ್ತನು ಬದುಕಿ ಬಾಳಿದ್ದು 55 ವರ್ಷ.

ವಿ. ಓ. ಚಿದಂಬರಮ್ ಪಿಳ್ಳೆಯವರು ತಮಿಳುನಾಡಿನಲ್ಲಿ ಜನಿಸಿ 23 ವರ್ಷಕ್ಕೆ ಕಾನೂನು ಅಧ್ಯಯನ ಮುಗಿಸಿ, ವಕೀಲಿ ವೃತ್ತಿ ಆರಂಭಿಸಿದರು. ಸಮುದ್ರ ವ್ಯಾಪಾರದ ಮೇಲಿರುವ ಬ್ರಿಟಿಷರ

ವಿಶಸ್ವಾಮ್ಯ ಮುರಿಯಲು "ಸ್ವದೇಶಿ ಸ್ಟೀಮ್ ನೆವಿಗೇಶನ್ ಕಂಪನಿ" ಸ್ಥಾಪಿಸಿದರು. ಸಾಗರ ಕಾರ್ಮಿಕರನ್ನು ಅವರ ಸಂಘಟಿಸಿದರು. ರಾಜದ್ರೋಹ ಅಪರಾಧಕ್ಕಾಗಿ 6 ವರ್ಷ ಜೇಲು ಅನುಭವಿಸುವಾಗ ಕಾವ್ಯರೂಪದಲ್ಲಿ ತಮಿಳಿನಲ್ಲಿ ತಮ್ಮ ಆತ್ಮ ಚರಿತ್ರೆ ರಚಿಸಿ 64 ವರ್ಷ ಬಾಳಿದರು.

**ವಿಠ್ಠಲಭಾಯಿ ಪಟೇಲರು** ಗುಜರಾತಿನಲ್ಲಿ ಜನಿಸಿ, ಮುಂಬಯಿಯಲ್ಲಿ ಕಾನೂನು ಓದಿ ವಕೀಲರಾದರು. 35ನೇ ವರ್ಷಕ್ಕೆ ಇಂಗ್ಲೆಂಡಿನಿಂದ ಬ್ಯಾರಿಸ್ಟರ್ ಪದವಿ ಪಡೆದರು. ಆದರೆ ಇದಾದ ಎರಡೇ ವರ್ಷದ ನಂತರ ಪತ್ನಿಯನ್ನು ಕಳೆದುಕೊಂಡರು. ಜಿನೀವಾದಲ್ಲಿ ನಡೆದ 'ಲೀಗ್ ಆಫ್ ನೇಶನ್' ಸಭೆಯಲ್ಲಿ ಭಾರತದ ಪರ ವಕಾಲತು ಮಾಡಲು ಹೋಗಿ, ಅಲ್ಲೇ ನಿಧನರಾದಾಗ ಇವರಿಗೆ 60 ವರ್ಷ ವಯಸ್ಸು.

**ಯು. ಗೋಪಬಂಧು ದಾಸ :** 'ಒರಿಸ್ಸಾದ ಒಡವೆ' ಎಂದೇ ಖ್ಯಾತರಾದವರು. ಉತ್ಕಲಮನಿ ಪಂಡಿತ ಗೋಪಬಂಧುದಾಸ್, ತಮ್ಮ 35ನೇ ವಯಸ್ಸಿಗೆ ವಕೀಲಿ ವೃತ್ತಿಗೆ ತಿಲಾಂಜಲಿ ನೀಡಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. 'ಲೋಕಸೇವಕ್ ಮಂಡಲ್' ಸದಸ್ಯರಾದ ಇವರು, ಖ್ಯಾತ ಶಿಕ್ಷಣತಜ್ಞರೂ ಹೌದು. ಕವಿ, ಸಾಹಿತಿಯಾಗಿ ಇವರು ನೀಡಿದ್ದು 'ಒಬ್ಬ ಕೈದಿಯ ಆತ್ಮ ಕಥೆ' ಎಂಬ ಮಹತ್ವದ ಕೃತಿ. ಇವರು ಬಾಳಿದ್ದು 51 ವರ್ಷ ಮಾತ್ರ.

**ಮೊಹಮ್ಮದ್ ಇಕ್ಬಾಲ್ :** ಸಿಯಾಲ್‌ಕೋಟ್‌ನಲ್ಲಿ ಜನಿಸಿದರು. ಲಾಹೋರ್ ಕಾಲೇಜಿನಲ್ಲಿ ದರ್ಶನ ಶಾಸ್ತ್ರದಲ್ಲಿ, ಸ್ನಾತಕೋತ್ತರ ಪದವಿ. 31ನೇ ವರ್ಷಕ್ಕೆ ಇಂಗ್ಲೆಂಡಿನಲ್ಲಿ ಕಾನೂನು ಅಧ್ಯಯನ. ಮ್ಯೂನಿಚ್ ವಿಶ್ವವಿದ್ಯಾಲಯದಿಂದ ಪಿ.ಹೆಚ್‌ಡಿ. ಪಡೆದ ಸಾಧನೆ. ನಂತರ ಲಾಹೋರಿಗೆ ಮರಳಿ, ವಕೀಲಿ ಆರಂಭ. ಉರ್ದು ಹಾಗು ಪರ್ಷಿಯನ್ ಭಾಷೆಯಲ್ಲಿ ಕಾವ್ಯ ರಚನೆ. 45ನೇ ವಯಸ್ಸಿನಲ್ಲಿ ಇವರ ಸೇವೆಗೆ ಬ್ರಿಟಿಷ್ ಸರ್ಕಾರ 'ನೈಟ್ ಹುಡ್' ಪದವಿ ನೀಡಿತು. 'ಸಾರೇಜಹಾಂಸೆ ಅಚ್ಛಾ ಹಿಂದೂಸ್ತಾನ್ ಹಮಾರಾ' ಎಂದು ಹಾಡಿದ ಈ ರಾಷ್ಟ್ರೀಯ ಕವಿ.

**ಜತೀಂದ್ರ ಮೋಹನ್ ಸೇನ್ ಗುಪ್ತ :** ಬಂಗಾಲದಲ್ಲಿ ಜನಿಸಿ, 36ನೇ ವರ್ಷಕ್ಕೆ ಇಂಗ್ಲೆಂಡಿನಲ್ಲಿ ಕಾನೂನು ಅಧ್ಯಯನ ಮುಗಿಸಿ, ಕಲ್ಕತ್ತಾದಲ್ಲಿ ವಕೀಲಿ ಆರಂಭಿಸಿದರು. ಆದರೆ ಅದೇ ವರ್ಷ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಲು ವಕೀಲಿ ವೃತ್ತಿ ತ್ಯಜಿಸಿದರು. 'ಬರ್ಮಾ ಆಯಿಲ್ ಲೇಬರ್ ಯೂನಿಯನ್' ಹಾಗೂ 'ಅಸ್ಸಾಂ - ಬೆಂಗಾಲ್ ರೇಲ್ವೇ ಯೂನಿಯನ್' ಅಧ್ಯಕ್ಷರಾಗಿ ದುಡಿದರು. ರಾಂಚಿಯಲ್ಲಿ ಗುಪ್ತ ಬಂಧನ ಕಾಲದಲ್ಲಿ ಅಸುನೀಗಿದಾಗ ಅವರಿಗೆ ಕೇವಲ 48 ವರ್ಷ ವಯಸ್ಸು. ಇವರ ಪತ್ನಿ ಇಂಗ್ಲಿಷಿನವಳಾದರೂ ಭಾರತದ ಬಿಡುಗಡೆಗಾಗಿ ಶ್ರಮಿಸಿದ ಧೀರೆ.

**ಎಸ್. ಸತ್ಯಮೂರ್ತಿ :** ಅಂದಿನ ಪುದುಕೋಟ್ಟೆಯಲ್ಲಿ ಜನಿಸಿ, ಮದ್ರಾಸಿನಲ್ಲಿ ಕಾನೂನು ಅಧ್ಯಯನ ಮಾಡಿ, ವಕೀಲರಾಗಿ ದುಡಿದರು. 'ಸ್ವರಾಜ್ಯ' ಪಾರ್ಟಿಯ ಪರವಾಗಿ, ಇಂಗ್ಲೆಂಡಿಗೆ ಹೋಗಿ, ಅಲ್ಲಿನ ಜನತೆಗೆ ಭಾರತೀಯರ ದೃಷ್ಟಿಕೋನ ವಿವರಿಸಿದರು. ಕರ್ನಾಟಕ ಸಂಗೀತ, ಶಾಸ್ತ್ರೀಯ ನೃತ್ಯದಲ್ಲಿ ಆಸಕ್ತಿ ಹೊಂದಿ, 'ಮದ್ರಾಸ್ ಸಂಗೀತ ವಿಲಾಸ ಸಭಾ'ದ ಉಪಾಧ್ಯಕ್ಷರಾದರು. ಅವರು ಆರಂಭಿಸಿದ ಪೂಂಡಿ ಜಲಾಶಯ ಯೋಜನೆ. ಇಂದು ಸತ್ಯಮೂರ್ತಿ ಸಾಗರ ಎಂದೇ ಖ್ಯಾತಿ. ಆಸ್ಪತ್ರೆಯಲ್ಲಿ ನಿಧನರಾದಾಗ ಅವರಿಗೆ 56 ವರ್ಷ ವಯಸ್ಸು.

**ತ್ರಿಪುರಾನೇನಿ ರಾಮಸ್ವಾಮಿ ಚೌಧುರಿ :** ಆಂಧ್ರದಲ್ಲಿ 'ಕವಿರಾಜ'ನೆಂದೇ ಪರಿಚಿತರು. ಸಂಸ್ಕೃತ ಕಲಿಯಲು ಆಸಕ್ತಿ, ಆದರೆ ಸಮಾಜದಿಂದ ವಿರೋಧ ಆದರೂ ಸ್ವಯಂ ಅಭ್ಯಸಿಸಿ, ಭಗವದ್ಗೀತಾ ಸೂತಪುರಾಣ, ರಾಣಾಪ್ರತಾಪ್, ಕುರುಕ್ಷೇತ್ರ ಸಂಗ್ರಾಮ ಕೃತಿ ರಚಿಸಿದರು. ಲಂಡನ್, ಡಬ್ಲಿನ್‌ನಲ್ಲಿ ಕಾನೂನು ಓದಿದರೂ, ತಮ್ಮ ವಕೀಲಿ ವೃತ್ತಿ ಎಂದೋ ತ್ಯಜಿಸಿ, ಸಮಾಜ ಸುಧಾರಣೆಯಲ್ಲಿ ತೊಡಗಿದರು. ಇವರು ಬದುಕಿದ್ದು 56 ವರ್ಷಕಾಲ ಮಾತ್ರ.

**ಮಹದೇವ್ ದೇಸಾಯಿ :** ಗುಜರಾತಿನಲ್ಲಿ ಜನಿಸಿ, ಮುಂಬೈನಲ್ಲಿ 21ನೇ ವರ್ಷಕ್ಕೆ ಕಾನೂನು ಪದವೀಧರರಾದರು. 25ನೇ ವಯಸ್ಸಿನಲ್ಲಿ, ಗಾಂಧೀಜಿಯವರನ್ನು ನೋಡಿದಾಗ, ಅವರಲ್ಲಿ ತಮ್ಮ ಗುರುವನ್ನು ಕಂಡು, ಜೀವನದ ಕೊನೆತನಕ, ಅವರನ್ನು ನೆರಳಿನಂತೆ ಹಿಂಬಾಲಿಸಿದರು. 'ಇಂಡಿಪೆಂಡೆಂಟ್' 'ನವಜೀವನ' ಪತ್ರಿಕೆ ಸಂಪಾದನೆ ಮಾಡುತ್ತಾ, ಪ್ರಖರ ಲೇಖನ ಬರೆದರು. 'ಭಾರತ್ ಛೋಡೋ' ಆಂದೋಳನದಲ್ಲಿ ಭಾಗವಹಿಸಿ, ಆಘಾಖಾನ್ ಅರಮನೆಯಲ್ಲಿ ಬಂಧನದಲ್ಲಿದ್ದಾಗಲೇ ತಮ್ಮ 50ನೇ ವಯಸ್ಸಿನಲ್ಲಿ ನಿಧನರಾದರು.

**ಮೋಹನ್‌ದಾಸ್ ಕರಮಚಂದ ಗಾಂಧಿಯವರು** ಮನುಷ್ಯ - ಮನುಷ್ಯರ ನಡುವೆ ವರ್ಣಭೇದ ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ಖಂಡನಾರ್ಹ ಎಂದು ನಂಬಿದವರು. ಆಫ್ರಿಕಾದಲ್ಲಿನ ವರ್ಣದ್ವೇಷ ನೀತಿಯ ವಿರುದ್ಧ ಶಾಂತಿ, ಅಹಿಂಸೆಯನ್ನೇ ಶಸ್ತ್ರಗಳಾಗಿ ಬಳಸಿ, ಪ್ರಪಂಚದ ಕಣ್ಣು ತೆರೆಸಿದರು. ಬ್ಯಾರಿಸ್ಟರ್ ಗಾಂಧಿ, ಮುಂದೆ ಈ ಅಸ್ತ್ರಗಳನ್ನೇ ಬಳಸಿ, ಭಾರತದಲ್ಲೂ 27 ವರ್ಷಗಳ ಕಾಲ ಅಖಂಡವಾಗಿ ಜನಸಾಮಾನ್ಯರನ್ನು ಸಂಘರ್ಷದಲ್ಲಿ ತೊಡಗಿಸಿ ಈ ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಡುವುದರಲ್ಲಿ ಅಪಾರ ಯೋಗದಾನ ನೀಡಿದರು. ಯುಗಪುರುಷ, ರಾಷ್ಟ್ರಪಿತ ಮಹಾತ್ಮ ಗಾಂಧಿ. ಇದುವರೆಗೆ ಸ್ಮರಿಸಲಾದ, 1817ರಲ್ಲಿ ಜನಿಸಿದ ಸಯ್ಯದ್ ಅಹ್ಮದ್‌ಖಾನರಿಂದ ಹಿಡಿದು - 1892ರಲ್ಲಿ ಜನಿಸಿದ ಮಹದೇವ್ ದೇಸಾಯಿವರೆಗಿನ ಎಲ್ಲ ಮಹಾನುಭಾವರು ದೇಶದ ಮುಕ್ತಿ ಆಂದೋಲನಕ್ಕೆ ಭದ್ರ ಬುನಾದಿ ಹಾಕಿದರು. ಆದರೆ ಇವರ್‍ಯಾರೂ ದೇಶ ಸ್ವತಂತ್ರ್ಯವಾದದನ್ನು ಕಣ್ಣಾರೆ ನೋಡಲಿಲ್ಲ. ಮಹಾತ್ಮ ಗಾಂಧಿ ಮಾತ್ರ ಕೇವಲ ಐದೂವರೆ ತಿಂಗಳು ಈ ದೃಶ್ಯವೈಭವ ಕಂಡು ಆನಂದಿಸಿದರು.!

"ಈ ಲೇಖನದಲ್ಲಿ ಕೇವಲ ಕೆಲವೇ ವ್ಯಕ್ತಿಗಳನ್ನು ಸ್ಮರಿಸಲಾಗಿದೆ. ಇದಕ್ಕೆ ಕಾರಣ ಇವರೆಲ್ಲರ ಬಗ್ಗೆ ಭಾರತ ಸರ್ಕಾರವು ಅಂಚೆ ಚೀಟಿಗಳನ್ನು ಹೊರತಂದಿರುವುದೇ ಆಧಾರ. ಅಂಚೆ ಚೀಟಿ ಬರದಿದ್ದರೂ, ದೇಶಕ್ಕಾಗಿ ದುಡಿದ, ಹೋರಾಟ ಮಾಡಿದ ನ್ಯಾಯಾಂಗದ ಹಲವಾರು ಮಹನೀಯರು ದೇಶಾದ್ಯಂತ ಹರಡಿದ್ದಾರೆ. ಇವರಲ್ಲಿ ಕೆಲವರ ನಾಮ ಸ್ಮರಣೆ ಮಾತ್ರ ಮುಂದಿನ ಭಾಗದಲ್ಲಿ ಮಾಡಲಾಗಿದೆ."

— ಉಮೇಶ್

# AN UNFORGETTABLE EXPERIENCE

by Dharmraj S. Kulkarni

Before I write my reminiscences of the Quit India movement of 1942 and my participation in the same, I think I should give a fleeting glimpse of my family background so that what I reflect upon could be appreciated. I hail from a family of Kulkarnis from Satti, a village on the bank of Krishna river in Athani Taluk of Belgaum district in Karnataka.

**We had introduced Shri Dharmaraj Kulkarni to our 'Neasaru' reader in our Sept. '96 issue. He is the recipient of Tulisidas Khitachand National Award' in its inception year. He is one of our life members. He is sharing here his own experience of the 'Quit India' Movement with the Neasru Readers on the occasion of the 50th year of India's Independence.**

The Kulkarnis of Satti are known for their sacrifices in the struggle of freedom - almost three generations have had the privilege of participating in these national movements for independence. My father Shamji Narayan Kulkarni was just a chip of the old block inspiring us to rise above narrow selfish considerations. My mother Bhagirathibai, hailed from the famous scholarly family of Adya Jahagirdas of Agarkhed on the banks of Bhima river in Indi Taluka of Bijapur district. Kulkarnis and Jahagirdars have marriage relations for the last two centuries. I was thus fortunate enough to grow in an atmosphere full of national feelings as an article faith permeating through learning aptitudes. My mother was an active volunteer at the 36th session of the Indian National Congress held at Belgaum in 1924 the only session at which Gandhiji presided. I was then a two year old child. My elder brother Anantao Kulkarni along with the countless number of people from the village and the surrounding areas were active in the Quit India Movement of 1942, just as our predecessors were active in the several of the freedom struggles the country witnessed. Born and brought up in such a privileged home, duty to the nation was the most natural instinct with which we were imbibed with. It is against this background I came to be associated with the quit India Movement in 1942. I was then a second year student for B.Com. in the Sydenham College of Commerce & Economics in Bombay and staying at its Students Hostel at Kemps Corner close to Gowalia Tank - the venue for the momentous session of August 1942 of the Indian National Congress in Bombay and that was fifty five years ago.

On 8th August 1942, a frail old man - once nicknamed as "the naked fakir" by none other than, Winston Churchill, Mahatma Gandhi - the father of the nation in his radiant voice asked the mightly British Government to "Quit India", Knowing well that it was by no means an easy task, he exhorted his countryman towards this end to "Do or Die", going a step further, and knowing fully well that most of the leaders would be arrested before dawn, he asked his countrymen to be on their own and be their own leaders to act and activate.

The magic touch of his words touched the deep recess of our heart - to move and surge ahead irrespective of the consequences we may encounter in our struggle for freedom. The last phase of the freedom movement had just begun - the mass was up in arms. The entire nation rose as one man to demonstrate its unshakable faith in its formidable to resolve to oust from this country the mightiest of the empires on this earth.

I was then an young student - barely 20 years old faced with the challenges to carve out my own action plan and the area of operation for implementing the same. I left my college education half way through as countless number of others did and decided to proceed to my native place Satti to oranize the Quit India Movement - keeping at the back of my mind what Gandhiji had advised.

Satti has historic association with freedom struggles where the young and the old mingle with each other to forge a united link; The educated and the uneducated, the literate and the illiterate the men and the women share the permeating air on the same wavelength. While my elder brother concentrated his efforts, at the Taluka and District levels, I decided to concentrate on Satti and its surrounding villages. In about a months time, we were an organized group - some fifty in number - others, almost the entire village providing the back up services we needed in support of our activity including vigilance services - who prewarned us of the approaching police or the C.I.D. so that we could reach our safety hideouts.

Our major thrust was on paraylsing the Government working, destroying government records, and properties such as dak bungalows, courtrooms, overhead cables and wires, the communication systems, post offices, mail boxes, railway stations and railway bridges. Looting of postal bags, cash vans and government treasuries was also a part our movement - through this was not a Gandhian approach, the underground leaders had outlined this programme and we followed it in its letter and spirit.

Our first major operation was setting on fire and destroying the Dak Bunglalow at Badchi - a village about 20 miles fro satti, A band of 15 youths - steadfast in their resolve was all set to move. We needed a tin of kerosene which was provided by one of our family members. Setting out at about eight o' clock in the night with a kerosene tin on our shoulder and dressed in Khaki half pant and Kakhi shirt holding a baton in our hands, we almost appeared as soldiers on the March. We walked through villages and hamlets reaching the target sight - about 32 kilometers at midnight. The Dak Bungalow had guard fast asleep. We tied him to a nearby tree and silenced him. Similar was the fate of the Khansama. Once they were out of the scene we set out as planned to set the

bungalow on fire. It was our first experience of this type of activity - as a part of our freedom movement. The entire wooden structure, the doors, the windows, the tables and other furniture was doused with kerosene and set on fire - within minutes the flames reached the sky and the bungalow was reduced to ashes - the nearby villages woke up to this thickning flames and rushed to the sight. Our two sentries on either side of the road however were more alert and warned us of the danger and we took to our heals before the villagers reached the spot. Back at Satti before the dawn - we had a hearty laugh and a well deserved sleep.

The operation Dak Bungalow was complete in all respects giving us a renewed courage to undertake these operations on a larger scale.

In the next 6-8 months, a number of dak bungalows, post offices, postal bags, railway stations, cable systems, Village chavadies were reduced to ashes and the news spread like a wild fire and wide. The Government could not swallow these successes of the fighters and for a stringent action against the organised groups. such as those of ours and many others like us they become restless. We had by now become a force to reckon with and a serious threat to the British rule. News of our exploits were regularly published by all the leading news papers of the area including some of the Bombay papers. We sent regular reports through our own channels to the underground leaders - both in Karnataka and at the All India Level. Just as we did by way of sending regular news items to the press. We had in fact established from the underground cell, a regular news reporting system with coded words.

Both my elder bother and myself being leaders of the organized underground groups, we had acquired a dubious distinction from the government as manufacturers of arms and ammuniation and suppliers to decoits and criminals - serious crime framed against us under 19F of the Arms Act. The penalty for such a menacing crime was imprisonment for life and/or death by hanging. Our activities had even come to the notice of the British government and a question was raised in the British Parliament. The British Government in London not only called for detailed report our activities. But after going through the records, the Indian government was asked to move fast to book us for our subvertive acts as they considered our exploits as a serious threat to the Government itself.

Thus the Government decided to act and strike at us - at an innocent group of freedom fighters engaged in the struggle for freedom to set themselves free from the subjugation of the British. The Operation Elimination was set into motion and no one in our village had even an inkling of the impending danger. Even the police headquarters at Athani and Belgaum with whom we had cordial relations did not know of the government action plan.

The Government at the center through its special cells had mobilised an army of 2000 Australian military personnel. They reached Satti during the wee hours and encircled the entire village not allowing even a soul to move out even if it were for answering a nature's call. So overwhelming was the military operation, the villagers were taken a back by surprise. Yet even under provocation they maintained their cool. House to house search was undertaken questioning the old and the young alike not sparing even the aged and the infirmed. They reached my house along with the village Patil for lidentification. My father relaxing on the jholla was confronted with threatening poses and the bayonet pointing towards his throat. They asked him to surrender his two sons or give details of their where abouts and the hiding place. My father was a seasoned man down to earth. He pleaded his inability to help them out and the ladies repeating the same what my father had said to the high ranking military officers. After vigorous searches they were disappointed. They made their retreat some time in the afternoon - thoroughly disheartened, dejected and deflated. It is interesting to note as to our whereabouts during this Military operations lasting about the whole day. We were in our own village - about 15 of us all underground soldiers wanted by the police with the warrants hanging over our heads. If one is familier with the topography of Satti, you will find that most of our houses particularly those of the Kulkarnis our uncles and cousins - about a dozen in number, are linked by a common wall with built in doors to move from one house to the other. We were camping at our outhouse - a separate wing by itself once used as cattle shed. When the military was at the entrance of my house we had moved to the adjoining house through the inbuilt door and when the military moved to the next house, we were back in our own outhhouse.

This incident instead of unnerving us, instilled a new sense of enthusiasm in us for further action. In subsequent operations however the military succeeded in catching us red handed when we were about to set on fire to the Kudchi Railway Station between Miraj & Belgaum during broad daylight when the gap between two trains was most convenient to undertake this operation. The military however over took us and arrested most of our group members. I was however lucky and escaped the arrest by hiding myself in a nearby sugar plantation, where I was fully protected by the plantation owners.Left alone I returned to Bombay to rejoin my college after an absence of two years, only to be turned out of the college premises by the pro-British Principal.

However, I pursued my further education in Ahmedabad while I was underground with the help and assistance from some of the national leaders and came out in the open when the government withdrew all the cases against me for lack of evidence.

As I sit back and think of those days - I Feel that we were fortunate enough to participate in the country's struggle for freedom - an experience unfathomable in its depth and unforgettable in its sweep. ●

## ವಿದ್ಯಾರಣ್ಯ ಕನ್ನಡ ಪ್ರಶಸ್ತಿಗೆ ಡಾ. ದೇಜಗೌಡ ಆಯ್ಕೆ

ಸುಪ್ರಸಿದ್ಧ ಬರಹಗಾರರೂ, ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ, ಕುವೆಂಪು ವಿದ್ಯಾವರ್ಧಕ ಟ್ರಸ್ಟಿನ ನಿರ್ದೇಶಕರೂ ಆದ ಡಾ. ದೇ. ಜವರೇಗೌಡ ಅವರನ್ನು ವಿದ್ಯಾರಣ್ಯ ಕನ್ನಡ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

'ದೆಹಲಿ ಕನ್ನಡಿಗ' ಮಾಸ ಪತ್ರಿಕೆ ಸ್ಥಾಪಿಸಿರುವ ಈ ಪ್ರಶಸ್ತಿಯನ್ನು ಮುಂದಿನ ಅಕ್ಟೋಬರ್ ೪ ಮತ್ತು ೫ರಂದು ಭೋಪಾಲದಲ್ಲಿ ನಡೆಯಲಿರುವ ೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಮ್ಮೇಳನದಲ್ಲಿ ನೀಡಲಾಗುವುದು ಎಂದು ಪತ್ರಿಕೆ ಸಂಪಾದಕ ಬಾ. ಸಾಮಗ ಅವರು ತಿಳಿಸಿರುತ್ತಾರೆ.

ಕರ್ನಾಟಕ ಸಂಸ್ಕೃತಿಗೆ ಒಟ್ಟು ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಡಾ. ದೇಜಗೌಡ ಅವರನ್ನು ಈ ಪ್ರಶಸ್ತಿಗೆ ತಜ್ಞರ ಸಮಿತಿಯು ಆಯ್ಕೆ ಮಾಡಲಾಗಿದೆ ಎಂದು ಸಾಮಗ ಅವರು ಹೇಳಿರುತ್ತಾರೆ.

ಇದೇ ಸಮ್ಮೇಳನದಲ್ಲಿ ನೀಡಲಾಗುವ ಇತರ ಪ್ರಶಸ್ತಿಗೆ ಆಯ್ಕೆಯಾದ ವಿವರಗಳು ಹೀಗಿವೆ.

ಕನ್ನಡದ ಪ್ರಖ್ಯಾತ ಕವಿಗಳೂ, ಗೀತನಾಟಕಕಾರರೂ ಆದ ಪದ್ಮಶ್ರೀ ಪು.ತಿ. ನರಸಿಂಹಾಚಾರ್ ಅವರನ್ನು ಬಿ.ಎಂ. ಶ್ರೀ ಸ್ಮಾರಕ ಸಾಹಿತ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕರ್ನಾಟಕದ ಮಾಜಿ ಮುಖ್ಯ ನ್ಯಾಯಾಧೀಶರೂ, ಸುಪ್ರಸಿದ್ಧ ಸಾಮಾಜಿಕ ಸೇವಾ ಕಾರ್ಯಕರ್ತರೂ ಆದ ನಿಟ್ಟೂರು ಶ್ರೀನಿವಾಸ ರಾವ್ ಅವರನ್ನು ಜೀ. ಕೆ.ವಿ. ಶಂಕರೇಗೌಡ ಸ್ಮಾರಕ 'ಶ್ರೇಷ್ಠ ಸಮಾಜಿಕ ಕಾರ್ಯಕರ್ತ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಕನ್ನಡಿಗರನ್ನು ಭೋಪಾಲದಲ್ಲಿನ ಕನ್ನಡ ಸಮ್ಮೇಳನದಲ್ಲಿ ಸನ್ಮಾನಿಸಲಾಗುವುದೆಂದು ಸಾಮಗ ಅವರು ತಿಳಿಸಿದರು.

### ಶ್ರೀನಾಥ್‌ಗೆ ಅರ್ಜುನ ಪ್ರಶಸ್ತಿ

ಭಾರತದ ಕ್ರಿಕೆಟ್‌ನ ಧ್ರುವತಾರೆ ಕರ್ನಾಟಕದ ಜಾವಗಲ್ ಶ್ರೀನಾಥ್ ಅವರಿಗೆ ಈ ವರ್ಷ ಭಾರತೀಯ ಕ್ರಿಕೆಟ್ ರಂಗದ ಉಚ್ಚ ಪ್ರಶಸ್ತಿ 'ಅರ್ಜುನ ಪ್ರಶಸ್ತಿ' ಸಿಕ್ಕಿರುವುದು. ಕರ್ನಾಟಕದ ನಮಗೆಲ್ಲಾ ಹೆಮ್ಮೆಯ ವಿಷಯ.

ನೇಸರು ಶ್ರೀನಾಥ ಅವರನ್ನು ಅಭಿನಂದಿಸುತ್ತಾ ಅವರಿಗೆ ಈ ರಂಗದಲ್ಲಿ ಇನ್ನೂ ಹೆಚ್ಚಿನ ಯಶಸ್ಸು ದೊರಕಲೆಂದು ಹಾರೈಸುತ್ತದೆ.

## ವಿದ್ಯೆ ಜೀವನಕ್ಕೆ ದಾರಿದೀಪ ಜ್ಞಾನಾರ್ಜನೆ ಮಾಧ್ಯಮ

ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಿ ತಮ್ಮ ಆಶೋತ್ತರಗಳನ್ನು ಸಾಧಿಸಿಕೊಂಡಾಗ ಆತ್ಮತೃಪ್ತಿ ಉಂಟಾಗುತ್ತದೆ. ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಅವಶ್ಯಕವಾದವುಗಳು. ಕಾಲೇಜಿನ ಸಂಘಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ವಿಶೇಷ ಸ್ಥಾನವನ್ನಿತ್ತಿವೆ. ಮಾರ್ಗದರ್ಶನ ಮಾಡುತ್ತಿವೆ. ಅವುಗಳ ಲಾಭವನ್ನು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತಿ ತೋರಿದು ಕ್ರಿಯಾಶೀಲ ಫಲ ಪ್ರದಾಯಕ ರೀತಿಯಲ್ಲಿ ಪಡೆದುಕೊಳ್ಳಬೇಕೆಂದು ಸೋಮೈಯ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸಂಜೀವ ಶೆಟ್ಟಿ ಅವರು ಕರೆಯಿತ್ತರು. ಡಾ. ಶೆಟ್ಟಿ ಅವರು ಸೋಮೈಯ ಕಾಲೇಜಿನ ಕನ್ನಡ ಸಂಘದ ವಾರ್ಷಿಕಾಧಿವೇಶನ ಪದಾಧಿಕಾರಿಗಳ ಆಯ್ಕೆಯ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಮಾತಾಡುತ್ತಿದ್ದರು.

ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಆಸಕ್ತಿವಹಿಸುವಂತೆ ಇತರ ಉತ್ತಮ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಪರೋಪಕಾರ ಪ್ರವೃತ್ತಿಯನ್ನು ದೂರವಿರಿಸಬೇಕು. ಸಮಾಜ ಸೇವೆಯನ್ನು ಮಾಡಬೇಕೆಂದು ಅಸಲ್ಫೆಯ ಕರ್ನಾಟಕ ಸಂಘದ ಕಾರ್ಯದರ್ಶಿ ಸಿದ್ದು ಸಿ. ಶೆಟ್ಟಿ ಅವರು ಅತಿಥಿ ಸ್ಥಾನದಿಂದ ಹೇಳಿದರು. ಚೆಂಬೂರಿನ ಕರ್ನಾಟಕ ಯುವಕ ಸಂಘದ ಅಧ್ಯಕ್ಷರಾದ ಶ್ರೀನಿವಾಸ ಎಸ್. ಉಡುಪ ಅವರು ಮತ್ತು ಕಾರ್ಯದರ್ಶಿ ರವಿ ಟಿ. ಪೂಜಾರಿ ಅವರು ಅತಿಥಿಗಳಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ಸಂಪಾದಕಿ ರಘುಯಾ ಬಲಿಯಾನ ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ನವೀನ ಹೆಗ್ಡೆ ವಂದಿಸಿದರು.

**ಮಹಾರಾಷ್ಟ್ರ ರಾಜ್ಯ ಕನ್ನಡ ಸಾಹಿತ್ಯ ಸಮ್ಮೇಳನ**

ಕರ್ನಾಟಕ ಸಂಘ ಮುಂಬಯಿ ಇದರ ಆಶ್ರಯದಲ್ಲಿ ಮಹಾರಾಷ್ಟ್ರ ರಾಜ್ಯ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ ಜರಗಿಸಲು ನಿರ್ಧರಿಸಲಾಗಿದೆ. ಡಿಸೆಂಬರ್ 6 ಮತ್ತು 7ನೇ ತಾರೀಕು ಎರಡು ದಿನಗಳಲ್ಲಿ ಜರಗುವ ಈ ಸಮ್ಮೇಳನದಲ್ಲಿ ಮಹಾರಾಷ್ಟ್ರ ರಾಜ್ಯದವರಲ್ಲದೆ ಹೊರನಾಡಿನ ಕನ್ನಡಿಗರೂ ಭಾಗವಹಿಸಲಿದ್ದಾರೆ. ಮಹಾರಾಷ್ಟ್ರದ ಎಲ್ಲ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗುವುದು. ಕನ್ನಡ ಸಂಘ ಸಂಸ್ಥೆಗಳ ಕಾರ್ಯಕರ್ತರನ್ನು, ಕನ್ನಡ ಸಾಹಿತ್ಯಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಮ್ಮೇಳನವನ್ನು ಯಶಸ್ವಿಗೊಳಿಸ ಬೇಕೆಂದು ಕರ್ನಾಟಕ ಸಂಘದ ಅಪೇಕ್ಷೆಯಾಗಿದೆ.

## ಅಭಿನಂದನೆ



**ಚೇತನ್ ಪ್ರಸಾದ್**

ನಮ್ಮ ಅಸೋಸಿಯೇಶನ್ನಿನ ಕಾರ್ಯದರ್ಶಿಗಳಾದ ಶ್ರೀ M.A.N. ಪ್ರಸಾದ್ ಹಾಗೂ ಕಲಾವಿಭಾಗದ ಪ್ರತಿಭಾನ್ವಿತ ಸದಸ್ಯೆಯಾದ ಶ್ರೀಮತಿ ಭಾರತಿ ಪ್ರಸಾದ್ ಇವರ ಮಗ ಚಿ ಚೇತನ್ ಪ್ರಸಾದ್ ತಾ. 1-8-1997ರಂದು ಹೆಚ್ಚಿನ ವ್ಯಾಸಂಗಕ್ಕಾಗಿ ಅಮೇರಿಕೆಗೆ ಪ್ರಯಾಣ ಬೆಳೆಸಿದ. ಚಿಕ್ಕಂದಿನಿಂದಲೂ ತನ್ನ ಬುದ್ಧಿಮತ್ತೆಯ ಪರಿಚಯವನ್ನು ಕೊಡುತ್ತ ಬಂದಿರುವ ಚೇತನ್ (S.S.C.ಯಲ್ಲಿ 93% ಗಳಿಸಿ ಉತ್ತೀರ್ಣನಾಗಿದ್ದನೆ. H.S.C.ಯಲ್ಲಿ ವಿಜ್ಞಾನ ಸಂಬಂಧೀ ವಿಷಯಗಳಲ್ಲಿ 95% ಗಳಿಸಿರುತ್ತಾನೆ) ಸ್ವಾಮಿ ವಿವೇಕಾನಂದ ಕಾಲೇಜಿನಿಂದ B.E. (Telecommunications) ಮಾಡಿರುತ್ತಾನೆ. (ಇಲ್ಲಿಯೂ ಸಹ ಪ್ರತಿ ಸೆಮಿಸ್ಟರ್‌ನಲ್ಲೂ Ist Classನಲ್ಲಿ ಉತ್ತೀರ್ಣನಾಗಿರುತ್ತಾನೆ) ಪಠ್ಯೇತರ ಚಟುವಟಿಕೆಗಳಲ್ಲೂ ಚುರುಕಾಗಿದ್ದ ಚೇತನ್‌ಗೆ Quizಗಳಲ್ಲೂ, ತಬಲಾ ಮತ್ತು Casio ವಾದನದಲ್ಲೂ ವಿಶೇಷ ಆಸಕ್ತಿ. ಅನೇಕ ಪಾರಿತೋಷಕಗಳನ್ನೂ, ಬಹುಮಾನಗಳನ್ನು ಗೆದ್ದಿರುತ್ತಾನೆ.

ಈಗ ಅಮೇರಿಕೆಯ ಅರಿಜೋನಾ ವಿಶ್ವ ವಿದ್ಯಾಲಯದಲ್ಲಿ M.S. ಮಾಡಲು ತೆರಳಿರುತ್ತಾನೆ. ಬೃಹತ್ ಭಾರತೀಯ ಸಮಾಜದಿಂದ S.K. Patil Foundation ನವರ ವಿದ್ಯಾರ್ಥಿ ವೇತನವನ್ನು ಪಡೆದಿರುತ್ತಾನೆ.

ನೇಸರು ಚೇತನ್‌ಗೆ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸುತ್ತದೆ.

---

ತಮ್ಮ ಸಂಸ್ಥೆಯು ಈ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಎಲ್ಲ ರೀತಿಯ ಸಹಕಾರ ನೀಡಬೇಕೆಂದು ವಿನಂತಿಸುತ್ತೇವೆ. ಈ ಬಗ್ಗೆ ತಮ್ಮ ಸಲಹೆ ಸೂಚನೆಗಳನ್ನು ಸ್ವಾಗತಿಸುತ್ತೇವೆ.

ಗೌ. ಕಾರ್ಯದರ್ಶಿ,

**ಕರ್ನಾಟಕ ಸಂಘ, ಮಾಹಿಮ್**

Regn. No: 040015/86
Regn. No. MH/by/NE121/95

# ಭಾರತದ ಸ್ವಾತಂತ್ರ್ಯ ಸುವರ್ಣ ಮಹೋತ್ಸವ

## ಸತ್ಯ, ಅಹಿಂಸೆ, ಶಾಂತಿ, ಸಹನೆ ಸಹಬಾಳ್ವೆಗಳಿಗೆ ದೃಢ ಸಂಕಲ್ಪ

ವಿಶ್ವ ಇತಿಹಾಸದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟ ಒಂದು ಅತ್ಯಪೂರ್ವ ಅಧ್ಯಾಯ. ಸ್ವಾತಂತ್ರ್ಯ ಗಳಿಕೆಯಲ್ಲಿ ಅದು ಅನುಸರಿಸಿದ ಸಂಯಮ ಮಾರ್ಗ ಜಗತ್ತಿಗೇ ಅನುಕರಣೀಯ. ಅದಕ್ಕಾಗಿಯೇ ಇತಿಹಾಸದಲ್ಲಿ ಅದಕ್ಕೆ ಅಗ್ರಪಟ್ಟ.

ಟಿಪ್ಪು ಸುಲ್ತಾನ್, ಕಿತ್ತೂರು ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ತಾತ್ಯಾಟೋಪಿ, ನಾನಾ ಸಾಹೇಬರಂತಹ ಸ್ವಾಭಿಮಾನಿ, ಸಾಹಸಿ ರಾಜಮನೆತನಗಳು ಸ್ವಾತಂತ್ರ್ಯಕ್ಕೆ ಧಕ್ಕೆಯೊದಗಿದಾಗ ವೀರಾವೇಷದಿಂದ ಹೋರಾಡಿ ಪರತಂತ್ರಕ್ಕೆ ಬಲಿಯಾಗದೆ ವೀರ ಮರಣವನ್ನೇ ಕಂಡರು. ಭಗತ್‌ಸಿಂಗ್,ಸುಖದೇವ್, ರಾಜಗುರು ಚಂದ್ರಶೇಖರ ಆಜಾದ್ ಅವರಂತಹ ಬಿಸಿರಕ್ತದ ಯುವಕರು, ಲಾಲಾ ಲಜಪತರಾಯ್, ಬಾಲಗಂಗಾಧರ ತಿಲಕ್, ಬಿಪಿನ್‌ಚಂದ್ರಪಾಲ್ (ಲಾಲ-ಬಾಲ-ಪಾಲ) ಮುಂತಾದ ಉಗ್ರ ಹೋರಾಟಗಾರರ ಸ್ಫೂರ್ತಿ ಸ್ವಾತಂತ್ರ್ಯ ಚಿಲುಮೆಯಾಗಿ ಚಿಮ್ಮಿತು. ಸ್ವಾತಂತ್ರ್ಯ ಹೋರಾಟವೆಂಬ ಉಗ್ರ ಸ್ವರೂಪದ ಸಾಗರದಲ್ಲಿ ಮುಂದೆ 1917ರಲ್ಲಿ ಮೋಹನದಾಸ್ ಗಾಂಧಿ ಎಂಬ ತಂಗಾಳಿಯು ಚುಕ್ಕಾಣಿ ಹಿಡಿದು ಮುನ್ನಡೆಯಿತು. ಸತ್ಯ, ಅಹಿಂಸೆ ಮತ್ತು ಸಂಯಮಗಳೇ ಈ ಮಹಾನ್ ನಾಯಕನ ಪ್ರಬಲ ಅಸ್ತ್ರಗಳಾದವು.

ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಸ್ವರೂಪ ಬಂತು. ಗಾಂಧಿ ಎಂಬ ಮಹಾ ಮಂತ್ರದಂಡಕ್ಕೆ ದೇಶದ ಸಮಸ್ತ ಜನ ಸಮುದಾಯವೇ ಮುನ್ನುಗ್ಗಿ ಬಂತು. ಹೆಣ್ಣು, ಗಂಡು, ಯುವಕರು, ಮುದುಕರು, ಬಡವರು, ಸಿರಿವಂತರು ಎಂಬ ಭೇದಭಾವವಿಲ್ಲದೆ ತಮ್ಮ ಗುಡಿ ಗುಡಾರಗಳು, ಶಾಲೆ-ಕಾಲೇಜುಗಳು, ಗುಡಿಸಲು, ಮನೆಗಳು, ಮಹಲ್‌ಗಳಿಂದ ಹೊರಬಂದರು. ಅದುವರೆಗೆ ಕತ್ತಿ ಖಡ್ಗ, ಮದ್ದು, ಗುಂಡುಗಳ ಸಹಾಯದಿಂದ ಗೆದ್ದಿದ್ದ ಬ್ರಿಟಿಷ್ ಸಾಮ್ರಾಜ್ಯದ ಜಂಘಾಬಲವೇ ಉಡುಗಿ ಹೋಯಿತು. ಈ ನಿಶ್ಶಸ್ತ್ರ ಧಾರಿ, ತ್ಯಾಗಿ ಜನಸಾಗರದ ಎದುರು ಜವಾಹರಲಾಲನೆಹರು, ಸರ್ದಾರ ವಲ್ಲಭಾಯಿ ಪಟೇಲ, ಸುಭಾಷ್‌ಚಂದ್ರಭೋಸ್, ಮೌಲನಾ ಅಬ್ದುಲ್ ಕಲಾಮ್ ಆಜಾದ್, ಡಾ. ಅಂಬೇಡ್ಕರ್ ಮುಂತಾದ ನೇತಾರರ ಸಹಯೋಗದಲ್ಲಿ ಗಾಂಧೀಜಿ ಸಾರಿದ್ದ ಅಹಿಂಸಾತ್ಮಕ ಸ್ವಾತಂತ್ರ್ಯ ಸಮರ, ಅಭಿಪ್ರಾಯ ಭೇದಗಳ ಮಧ್ಯದಲ್ಲೂ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿತು. ಮಹಾತ್ಮ ಗಾಂಧಿಯ ಸಂಮೋಹನಕ್ಕೆ ಒಳಗಾದ "ಸೂರ್ಯ ಮುಳುಗದ ಸಾಮ್ರಾಜ್ಯ" ಮನಸೋತು ಸ್ವಾತಂತ್ರ್ಯ ಜ್ಯೋತಿಯನ್ನು ಕೈಗಿತ್ತು ಕಾಲ್ತೆಗೆಯಿತು.

ಈ ಮಹಾನ್ ವಿಜಯಗಾಥೆಯಲ್ಲಿ ಕನ್ನಡಿಗರ ಕೊಡುಗೆ ಅನುಪಮ. ಮೈಸೂರು ಹುಲಿ ಟಿಪ್ಪುಸುಲ್ತಾನ್, ರಾಣಿಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಅಬ್ಬಕ್ಕದೇವಿ, ವೀರ ಸಿಂಧೂರ ಲಕ್ಷ್ಮಣರ ವೀರಗಾಥೆಗಳು ಮೈನವಿರೇಳಿಸುತ್ತವೆ.

ಅಹಿಂಸಾ ಪಥದಲ್ಲಿ ಸಾಗಿದ್ದ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಲು ತಮ್ಮ ಸಕಲ ಸಂಪತ್ತನ್ನು ತ್ಯಾಗ ಮಾಡಿ ಬಂದ ಮಹನೀಯರು ಶಾಲಾ ಕಾಲೇಜುಗಳನ್ನು ತೊರೆದ. ವಿದ್ಯಾರ್ಥಿ ಸಮುದಾಯ, ಹಳ್ಳಿ, ಹಳ್ಳಿಗಳಿಂದ ಬಂದ ಜನರೆಲ್ಲರ ಏಕಮಾತ್ರ ಮಂತ್ರ -"ಸ್ವತಂತ್ರ ಭಾರತ."

ಆಗಸ್ಟ್ 1942ರಲ್ಲಿ 'ಕ್ವಿಟ್ ಇಂಡಿಯಾ ಚಳುವಳಿ'ಯಲ್ಲಿ ಕರ್ನಾಟಕದ ಸ್ವಾತಂತ್ರ್ಯ ಯೋಧರ ಪಾತ್ರ ಬಹಳ ಹಿರಿದು. ಮೈಲಾರ ಮಹದೇವಪ್ಪ, ಮೋಸಿನ ಕಾಳು ತಿಮ್ಮಣ್ಣಗೌಡ, ಕೊಟ್ರೆ ನಂಜಪ್ಪ ಈ ಚಳುವಳಿಯಲ್ಲಿ ವೀರಮರಣವನ್ನಪ್ಪಿದ ಪ್ರಮುಖರು.

ಗಂಗಾಧರರಾವ್ ದೇಶಪಾಂಡೆ, ತಗಡೂರು ರಾಮಚಂದ್ರರಾವ್, ಕೌಜಲಗಿ ಹನುಮಂತರಾವ್, ಕೌಜಲಗಿ ಶ್ರೀನಿವಾಸ ರಾವ್, ಎಸ್. ಚೆನ್ನಯ್ಯ ಗೋವಿಂದ ರಾವ್ ಯಾಲಗಿ, ಹನುಮಂತರಾವ್ ದೇಶಪಾಂಡೆ, ಕಾರ್ನಾಡ ಸದಾಶಿವರಾವ್, ರಂಗನಾಥ ದಿವಾಕರ್, ಡಾ. ನಾ. ಸು. ಹರ್ಡೀಕರ್, ಅಂಬಲಿ ಚೆನ್ನಬಸಪ್ಪ, ಕೆ. ಸಿ. ರೆಡ್ಡಿ, ಟೇಕೂರು ಸುಬ್ರಮ್ಮಣ್ಯಂ, ಕೆ. ಟಿ. ಭಾಷ್ಯಂ, ಹೆಚ್. ಸಿ. ದಾಸಪ್ಪ, ವೀರಣ್ಣ ಗೌಡ, ಶ್ರೀರಂಗ ಕಾಮತ್, ಬಿಂದು ಮಾಧವ ಬುರ್ಲಿ, ನರಸಿಂಹ ದಾಬಡೆ, ಸಂಗೂರು ಕರಿಯಪ್ಪ, ವೆಂಕಟೇಶ್ ಮಾಗಡಿ, ಕೆ. ಬಿ. ದುಂಧುರ,ಶಂಕರ್ ಕುರ್ತಕೋಟಿ ಮುಂತಾದ ಮಹನೀಯರು ತೋರಿದ ನಿಸ್ವಾರ್ಥ ಮನೋಭಾವ ಮತ್ತು ತ್ಯಾಗಜೀವನ ಸದಾಸ್ಮರಣೀಯ. ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ಮುತ್ಸದ್ದಿ ಸಿದ್ಧವ್ವನಹಳ್ಳಿ ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ಕಡಿದಾಳ ಮಂಜಪ್ಪ, ಶಿಕ್ಷಣ ತಜ್ಞ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿ ಡಾ. ಹೆಚ್. ನರಸಿಂಹಯ್ಯನವರಂತಹ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನಡುವೆ ಇದ್ದು ನಿರಂತರ ಸ್ಫೂರ್ತಿಯ ನೆಲೆಯಾಗಿರುವುದು ಕನ್ನಡಿಗರೆಲ್ಲರಿಗೂ ಹೆಮ್ಮೆಯ ಸಂಗತಿ.

ವಿಜ್ಞಾನ, ಕೃಷಿ, ನೀರಾವರಿ ಕ್ಷೇತ್ರಗಳಲ್ಲಿ ಮಹತ್ತರ ಪ್ರಗತಿಯನ್ನು ಸಾಧಿಸಿ ದೇಶ ಅಭಿವೃದ್ಧಿ ಶೀಲ ದೇಶಗಳ ಸಾಲಿನ ಮುಂಚೂಣಿಯಲ್ಲಿದೆ.

ರಾಷ್ಟ್ರದ ಅಭಿವೃದ್ಧಿಯ ಜತೆ ಜತೆಯಲ್ಲಿ ಕರ್ನಾಟಕವು ಗಮನಾರ್ಹ ಪ್ರಗತಿ ಸಾಧಿಸುತ್ತಾ ಇಡೀ ದೇಶದ ದೃಷ್ಟಿಯನ್ನೇ ತನ್ನೆಡೆಗೆ ಸೆಳೆದಿದೆ.

ಆಡಳಿತ ಯಂತ್ರವನ್ನು ಚುರುಕುಗೊಳಿಸಿ ಸರ್ಕಾರವನ್ನು ಜನರ ಸಮೀಪಕ್ಕೊಯ್ಯಲು ಮತ್ತಷ್ಟು ಅವಕಾಶವಾಗುವಂತೆ ಒಂಭತ್ತು ಹೊಸ ಜಿಲ್ಲೆಗಳ ಆರಂಭಕ್ಕೆ ಕ್ರಮ. ಮೊದಲ ಹಂತದಲ್ಲಿ 7 ಜಿಲ್ಲೆಗಳ ಉದಯ. 40 ವರ್ಷಗಳಿಂದಲೂ ನನೆಗುದಿಯಲ್ಲಿದ್ದ ಈ ವಿಷಯದಲ್ಲಿ ಸರ್ಕಾರದ ದಿಟ್ಟ ನಿರ್ಧಾರದ ಮೂಲಕ ಅಂತಿಮ ತೆರೆ.

ಅಧಿಕಾರ ವಿಕೇಂದ್ರೀಕರಣಗೊಂಡು ಪರಿಣಾಮಕಾರಿ ಆಡಳಿತ ಸಿಗುವಂತಾಗಲು ಸರ್ಕಾರ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಚುನಾವಣೆ ನಡೆಸಿ ಜನರ ಕೈಗೆ ಅಧಿಕಾರ ಕೊಟ್ಟು ಪ್ರಜಾಪ್ರಭುತ್ವಕ್ಕೆ ಭದ್ರ ಬುನಾದಿ ಹಾಕಿದೆ.

ರಾಜ್ಯದ ಗ್ರಾಮೀಣ ಬದುಕಿನಲ್ಲಿ ಹೊಸ ಬೆಳಕು ಮೂಡಿಸಿ ಜನರಲ್ಲಿ ಅದಮ್ಯ ಚೈತನ್ಯ ತರಲು 'ಸ್ವಸ್ತಿ' ಗ್ರಾಮ ಯೋಜನೆ ಎಂಬ ವಿನೂತನ ಯೋಜನೆ ಆರಂಭ. ಈ ಮೂಲಕ ಮಹಾತ್ಮ ಗಾಂಧೀಜಿಯವರ ಕನಸಿನ ಸಾಕಾರಕ್ಕೆ ಸಂಕಲ್ಪ. ಈ ಯೋಜನೆಯಡಿ ಮೊದಲ ಹಂತವಾಗಿ ರಾಜ್ಯದ ಪ್ರತಿ ಜಿಲ್ಲೆಯಿಂದ ಅತ್ಯಂತ ಹಿಂದುಳಿದ ಒಂದೊಂದು ಗ್ರಾಮವನ್ನು ಆಯ್ಕೆ ಮಾಡಿ ಅದನ್ನು ಮಾದರಿ ಮತ್ತು ಆಧುನಿಕ ಗ್ರಾಮವನ್ನಾಗಿಸಲು ಸನ್ನದ್ಧತೆ. 27,000 ಗ್ರಾಮಗಳಲ್ಲಿ ವಾಸಿಸುತ್ತಿರುವ 350 ಲಕ್ಷಗ್ರಾಮೀಣ ಜನರ ಮೊಗದಲ್ಲಿ ನಗೆಹೂನಲಿಗೆ ನಾಂದಿ.

**50ನೇ ಸ್ವಾತಂತ್ರ್ಯೋತ್ಸವದ ಕೊಡುಗೆ** : ಸ್ವಾತಂತ್ರ್ಯ ಹೋರಾಟಗಾರರ ಮಾಸಾಶನ ರೂ. 750ಕ್ಕೆ ಹೆಚ್ಚಳ. 10,000 ಶಾಲಾ ಕೊಠಡಿಗಳ ನಿರ್ಮಾಣ. 18,500 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ. ಶಾಲೆಗಳೇ ಇಲ್ಲದ ಪ್ರದೇಶಗಳಲ್ಲಿ 2000 ನೂತನ ಕಿರಿಯ ಪ್ರಾಥಮಿಕ ಶಾಲೆಗಳ ಆರಂಭ. 2000 ಕಿರಿಯ ಪ್ರಾಥಮಿಕ ಶಾಲೆಗಳ ಪ್ರಾರಂಭಕ್ಕೆ ಕ್ರಮ. ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ತಮ್ಮ ಅಗತ್ಯಗಳನ್ನು ಸುಲಭವಾಗಿ ಪಡೆದುಕೊಳ್ಳುವಂತಾಗಲು ಸುಧಾರಿತ ರಸ್ತೆ ಸಂಪರ್ಕ.

ಶ್ರೀ ಜೆ. ಹೆಚ್ ಪಟೇಲ್
ಮಾನ್ಯ ಮುಖ್ಯ ಮಂತ್ರಿಗಳು.

ಭಾರತ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಶುಭದಿನದಂದು ನಾವೆಲ್ಲರೂ ಸ್ವಾತಂತ್ರ್ಯ ಹೋರಾಟದ ಘನ ಉದ್ದೇಶಕ್ಕೆ ನಮ್ಮನ್ನು ಪುನರ್ ಸಮರ್ಪಿಸಿಕೊಳ್ಳೋಣ ನಮ್ಮ ಸ್ವಾತಂತ್ರ್ಯ ನೇತಾರರ ಕನಸನ್ನು ನನಸಾಗಿಸಲು ಕಂಕಣಬದ್ಧರಾಗೋಣ.

ಸುವರ್ಣ ಭಾರತ - ಸಮೃದ್ಧ ಕರ್ನಾಟಕ

ಕರ್ನಾಟಕ ವಾರ್ತೆ.

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38